ಸಂಪುಟ 01 । ಸಂಚಿಕೆ 175 ಶನಿವಾರ 29 ಆಗಸ್ಟ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ರಾಷ್ಟ್ರೀಯ ಕ್ರೀಡಾ ದಿನ (National Sports Day ? India)**

ಆಗಸ್ಟ್ 29ರಂದು ಭಾರತದಲ್ಲಿ ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲಾಗುತ್ತದೆ. ಇದು ಭಾರತದ ಖ್ಯಾತ ಹಾಕಿ ಆಟಗಾರ ಮೇಜರ್ ಧ್ಯಾನ್ ಚಂದ್ ಅವರ ಜನ್ಮದಿನದ ಸ್ಮರಣಾರ್ಥ ಆಚರಿಸಲಾಗುತ್ತದೆ. ಕ್ರೀಡೆಯ ಮಹತ್ವ, ಆರೋಗ್ಯ ಮತ್ತು ಕ್ರೀಡಾಪಟುಗಳ ಸಾಧನೆಗಳನ್ನು ಗೌರವಿಸುವುದು ಈ ದಿನದ ಪ್ರಮುಖ ಉದ್ದೇಶ.

**2) International Day Against Nuclear Tests**

ಆಗಸ್ಟ್ 29ರಂದು ಅಣ್ವಸ್ತ್ರ ಪರೀಕ್ಷೆಗಳ ವಿರುದ್ಧದ ಅಂತರರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತದೆ. ಅಣ್ವಸ್ತ್ರ ಪರೀಕ್ಷೆಗಳಿಂದ ಉಂಟಾಗುವ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ವಿಶ್ವದಲ್ಲಿ ಶಾಂತಿ ಹಾಗೂ ಅಣ್ವಸ್ತ್ರ ಮುಕ್ತ ಭವಿಷ್ಯಕ್ಕಾಗಿ ಒತ್ತು ನೀಡುವುದು ಇದರ ಉದ್ದೇಶ.

**3) ತೆಲುಗು ಭಾಷಾ ದಿನೋತ್ಸವ (Telugu Bhasha Dinotsavam)**

ತೆಲುಗು ಭಾಷಾ ದಿನೋತ್ಸವವನ್ನು ಪ್ರತಿವರ್ಷ ಆಗಸ್ಟ್ 29ರಂದು ಆಚರಿಸಲಾಗುತ್ತದೆ. ಈ ದಿನವು ಪ್ರಸಿದ್ಧ ತೆಲುಗು ಕವಿ ಮತ್ತು ಭಾಷಾ ಸುಧಾರಕ ಗಿಡುಗು ವೆಂಕಟ ರಾಮಮೂರ್ತಿ ಅವರ ಜನ್ಮದಿನವನ್ನು ಸ್ಮರಿಸುವುದಕ್ಕಾಗಿ ಆಚರಿಸಲಾಗುತ್ತದೆ.

## ಸುಭಾಷಿತ

ಒಬ್ಬ ವ್ಯಕ್ತಿಯ ಪ್ರತಿಭೆಯನ್ನು
ಯಾರಿಂದಲೂ ಬಚ್ಚಿಡಲು ಸಾಧ್ಯವಿಲ್ಲ.

–ಸ್ವಾಮಿ ವಿವೇಕಾನಂದ

# ರಾಜ್ಯ ರಾಜಕಾರಣದಲ್ಲಿ ಭಾರೀ ಸಂಚಲನ

## ಆರೋಪಗಳ ನಡುವೆ ಎರಡನೇ ಬಾರಿ ಸಚಿವ ಸ್ಥಾನಕ್ಕೆ ಬಿ ನಾಗೇಂದ್ರ ಗುಡ್‌ಬೈ

❑ ನೈಜ್ಯ ದೆಸೆ ನ್ಯೂಸ್



**ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಹಗರಣ–ಕ್ಕೆ ಸಂಬಂಧಿಸಿದಂತೆ ಬಿ.ನಾಗೇಂದ್ರ ಶುಕ್ರವಾರ ಸಚಿವ ಸ್ಥಾನಕ್ಕೆ ರಾಜೀನಾಮೆ ಘೋಷಿಸಿದ್ದಾರೆ. ಆ ಮೂಲಕ ಮುಖ್ಯಮಂತ್ರಿ ಮಂಡಲದ ಮೊದಲ ಸಚಿವರ ತಲೆದಂಡವಾದಂತಾಗಿದೆ.**

ಶುಕ್ರವಾರ ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಬಿ.ನಾಗೇಂದ್ರ, 'ವಾಲ್ಮೀಕಿ ನಿಗಮದಲ್ಲಿ ನಡೆದ ಹಗರಣದಲ್ಲಿ ನನ್ನ ಯಾವುದೆ ಪಾತ್ರವಿಲ್ಲ. ಶೇ.100 ಶೇ.100ರಷ್ಟು ಹಣವನ್ನು ವಾಪಸ್ ಪಡೆಯಲಾಗಿದೆ. ಬ್ಯಾಂಕಿನಲ್ಲಿ ಈ ಅಕ್ರಮ ನಡೆದಿರುವುದರಿಂದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜೀನಾಮೆ ನೀಡುವರೆ?' ಎಂದು ಪ್ರಶ್ನಿಸಿದರು.ಕಾಂಗ್ರೆಸ್ ಪಕ್ಷ ಹಾಗೂ ವರಿಷ್ಠರಿಗೆ, ಮುಖ್ಯಮಂತ್ರಿಗೆ ಮುಜುಗರ ಆಗಬಾರದು ಎಂಬ ಕಾರಣದಿಂದ ಸ್ವ ಇಚ್ಛೆಯಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ' ಎಂದು ಹೇಳುವಾಗ ಗದ್ಗದಿತರಾದ ನಾಗೇಂದ್ರ, ಕಣ್ಣೀರು ಹಾಕಿದರು. ಈ ಸಂದರ್ಭದಲ್ಲಿ ರಾಜ್ಯಸಭಾ ಸದಸ್ಯ ಡಾ.ಸೈಯದ್ ನಾಸಿರ್ ಹುಸೇನ್ ಹಾಗೂ ಸಚಿವ ರಿಝ್ವಾನ್ ಅರ್ಷದ್ ಸಮಾಧಾನಪಡಿಸಿದರು.

'ಮುಂಗಾರು ಅಧಿವೇಶನದಲ್ಲಿ ನಮ್ಮ ಸರಕಾರ ಈ ವಿಚಾರಕ್ಕೆ ಸಂಬಂಧಿಸಿದಂತೆ ವಿಪಕ್ಷಗಳು ನೋಟಿಸ್ ನೀಡಿದ್ದರೆ ಚರ್ಚೆಗೆ ಸಿದ್ಧವಾಗಿತ್ತು. ಬರಗಾಲ, ಕೆಪಿಎಸ್‌ಸಿ ನೇಮಕಾತಿ ಹಗರಣ, ಕಾವೇರಿ ನೀರಿನ ಸಮಸ್ಯೆ ಕಸ್ತೂರಿ ರಂಗನ್ ವರದಿ ಸೇರಿದಂತೆ ಹಲವಾರು ಜ್ವಲಂತ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ಅವಕಾಶವಿತ್ತು. ಆದರೆ, ಇಲ್ಲದ ವಿಷಯವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸದನದ ಸಮಯವನ್ನು ಹಾಳು ಮಾಡಿದರು' ಎಂದು ನಾಗೇಂದ್ರ ಕಿಡಿಗಾರಿದರು.ಶೂದ್ರರು, ದಲಿತರು, ಮಹಿಳೆಯರು, ಆದಿವಾಸಿಗಳು, ಅಲ್ಪಸಂಖ್ಯಾತರು ಬೆಳೆಯುವುದು ಈ ಮನುವಾದಿಗಳಿಗೆ ಇಷ್ಟವಿಲ್ಲ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ನನ್ನ ಪಾತ್ರವಿದೆ ಎಂದು ಸುಳ್ಳು ಹೇಳಿಕೊಂಡು, ನಮ್ಮ ಸಮುದಾಯದ ಮುಗ್ಧ ಜನರನ್ನು ನಂಬಿಸಲು ಪಾದಯಾತ್ರೆ ಮಾಡಲು ಹೊರಟಿದ್ದಾರೆ. ಅವರಿಗೆ ಒಳ್ಳೆಯದಾಗುವುದಿಲ್ಲ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'2024ರಲ್ಲಿಯೂ ಇದೇ ವಿಚಾರಕ್ಕೆ ಸಂಬಂಧಿಸಿದಂತೆ ನಾನು ರಾಜೀನಾಮೆ ನೀಡಿದೆ. ಎಸ್‌ಐಟಿ ಮೂಲಕ ತನಿಖೆ ನಡೆಯಿತು. ವಿನಾಕಾರಣ ಈ.ಡಿ ಮಧ್ಯಪ್ರವೇಶ ಮಾಡಿ, ಕುತಂತ್ರ ನಡೆಸಿ ನನ್ನನ್ನು ಜೈಲಿಗೆ ಕಳುಹಿಸಿದರು. ಜಾಮೀನು ಪಡೆದು ಹೊರಗೆ ಬಂದೆ, ಈ.ಡಿ ದಾಖಲಿಸಿದ ಮೊದಲ ಆರೋಪ ಪಟ್ಟಿಯಲ್ಲಿ ನನ್ನ ಹೆಸರು ಇರಲಿಲ್ಲ. ಎರಡನೆ ಆರೋಪ ಪಟ್ಟಿಯಲ್ಲಿ ತರಾತುರಿಯಾಗಿ ನನ್ನ ಹೆಸರು ಸೇರಿಸಲಾಯಿತು' ಎಂದು ನಾಗೇಂದ್ರ ಆರೋಪಿಸಿದರು.ನನಗೆ ನ್ಯಾಯಾಂಗ, ಸಂವಿಧಾನದ ಮೇಲೆ ಗೌರವವಿದೆ. ರಾಜ್ಯಪಾಲರೆ ನನಗೆ ಸಚಿವ ಸ್ಥಾನದ ಪ್ರಮಾಣ ವಚನ ಬೋಧಿಸಿದರು. ಈಗ ಅವರ ಮೂಲಕವೆ ವಿಪಕ್ಷಗಳು ನನ್ನ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿಸಿದ್ದಾರೆ. ಬಿಜೆಪಿಯಲ್ಲಿರುವ ಎಷ್ಟು ಮಂದಿ ವಿರುದ್ಧ ಪ್ರಕರಣಗಳು ದಾಖಲಾಗಿವೆ, ತಂದೆಯ ಸಹಿಯನ್ನೆ ನಕಲು ಮಾಡಿದವರು, ಶೇ.40ರಷ್ಟು ಲೂಟಿ ಮಾಡಿದವರು ನಿಮ್ಮ ಪಕ್ಷದಲ್ಲಿ ಇಲ್ಲವೇ?' ಎಂದು ನಾಗೇಂದ್ರ ಪ್ರಶ್ನಿಸಿದರು.

'ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಮೂರು ವರ್ಷಗಳಾದರೂ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ಕೊಟ್ಟಿಲ್ಲ. ಈಗ ಅವರು ನಿಮ್ಮ ಜೊತೆ ಮೈತ್ರಿಯಲ್ಲಿದ್ದಾರೆ ಎಂಬ ಕಾರಣಕ್ಕೆ ಅವರಿಗೆ ವಿನಾಯಿತಿಯೆ ಅವರಿಗೆ ಒಂದು ನ್ಯಾಯ, ನಮಗೆ ಒಂದು ನ್ಯಾಯವೇ' ಎಂದು ನಾಗೇಂದ್ರ ಆಕ್ರೋಶ ವ್ಯಕ್ತಪಡಿಸಿದರು.ಮುಂದಿನ ಚುನಾವಣೆಯಲ್ಲಿ ಇದೇ ವಿಷಯವನ್ನು ಮುಂದಿಟ್ಟುಕೊಂಡು ಹೋಗುತ್ತೇನೆ. ಒಬ್ಬ ನಿರಪರಾಧಿಯನ್ನು ಅಪರಾಧಿ ಮಾಡಲು ಹೊರಟಿದ್ದೀರಾ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯಂತಹ ದೇಶದ ಹಿರಿಯ ನಾಯಕರನ್ನೆ ಅವಮಾನಿಸಿದ ನೀವು, ಇನ್ನೂ ನಮ್ಮನ್ನು ಬಿಡುತ್ತೀರಾ' ಎಂದು ನಾಗೇಂದ್ರ ಹೇಳಿದರು.

ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಲು ಸಿದ್ಧ: 'ಪಕ್ಷದ ವರಿಷ್ಠರು ಅವಕಾಶ ನೀಡಿದರೆ ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಲು ಸಿದ್ಧ ಬಳ್ಳಾ–ರಿಯ ಸ್ವ ಘೋಷಿತ ನಾಯಕರಾದ ಶ್ರೀರಾಮುಲು, ಜನಾರ್ದನ ರೆಡ್ಡಿ ಅವರೇ ಬನ್ನಿ ಜನತಾ ನ್ಯಾಯಾಲಯಕ್ಕೆ ಹೋಗೋಣ. ನಾನು ತಪ್ಪು ಮಾಡಿದ್ದರೆ ನನ್ನ ಜನ ನನ್ನನ್ನು ಸೋಲಿಸುತ್ತಾರೆ. ಶ್ರೀರಾಮುಲು ಅಣ್ಣ ನಿಮಗೆ ತಾಕತ್ತಿದ್ದರೆ ನನ್ನ ಸವಾಲು ಸ್ವೀಕರಿಸಿ ಅಖಾಡಕ್ಕೆ ಬನ್ನಿ' ಎಂದು ನಾಗೇಂದ್ರ ಸವಾಲು ಹಾಕಿದರು.'ಈ.ಡಿ, ಸಿಬಿಐ ಇವುಗಳಿಗೆಲ್ಲ ನಾನು ಹೆದರುವುದಿಲ್ಲ. ಜನಾರ್ದನ ರೆಡ್ಡಿ, ಶ್ರೀರಾಮುಲು ನನ್ನ ವಿರುದ್ಧ ಮಾಡುತ್ತಿರುವ ಕುತಂತ್ರಗಳೆಲ್ಲ ಗೊತ್ತಿದೆ. ಬಳ್ಳಾರಿಯಲ್ಲಿ ಚಲಾವಣೆಯಲ್ಲಿ ಇಲ್ಲದ ನಾಣ್ಯಗಳಾಗಿರುವ ನಿಮಗೆ ಒಂದಲ್ಲ, ಎರಡೆರಡು ಬಾರಿ ಜನ ಛೀಮಾರಿ ಹಾಕಿದ್ದಾರೆ. ಅಖಾಡಕ್ಕೆ ಇಳಿಯಲು ನಾನು ಸಿದ್ಧ ಕಾನೂನು ಹೋರಾಟದಲ್ಲಿ ನಾನು ಆರೋಪ ಮುಕ್ತನಾಗಿ ಹೊರಬರುತ್ತೇನೆ ಎಂಬ ಸಂಪೂರ್ಣ ವಿಶ್ವಾಸವಿದೆ' ಎಂದು ಅವರು ಹೇಳಿದರು.

ವಾಲ್ಮೀಕಿ ಜನಾಂಗದ ದೃಷ್ಟಿಯಲ್ಲಿ ನನ್ನನ್ನು ಖಳನಾಯಕನನ್ನಾಗಿ ಮಾಡಲು ಹೊರಟಿದ್ದಾರೆ. ನನ್ನ ಸಮಾಜಕ್ಕೆ ಯಾರು ಒಳ್ಳೆಯವರು, ಯಾರು ಕೆಟ್ಟವರು ಎಂಬುದು ಗೊತ್ತಿದೆ. ನಿಮ್ಮ ಕುತಂತ್ರಗಳಿಗೆಲ್ಲ ಉತ್ತರ ಕೊಡುವ ಕಾಲ ಬಹಳ ಬೇಗ ಬರಲಿದೆ ಎಂದು ನಾಗೇಂದ್ರ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಸಚಿವರಾದ ರಿಝ್ವಾನ್ ಅರ್ಷದ್, ಡಾ.ಅಜಯ್ ಸಿಂಗ್, ರಾಜ್ಯಸಭಾ ಸದಸ್ಯರಾದ ಡಾ.ಸೈಯದ್ ನಾಸಿರ್ ಹುಸೇನ್, ಜಿ.ಸಿ.ಚಂದ್ರಶೇಖರ್, ಶಾಸಕ ನಾ.ರಾ.ಭರತ್ ರೆಡ್ಡಿ ಉಪಸ್ಥಿತರಿದ್ದರು.

## ವನಸಿರಿ ಪೌಂಡೇಷನ್ ನಿಂದ ವೃಕ್ಷ ಬಂಧನ ಆಚರಣೆ

❑ ನೈಜ್ಯ ದೆಸೆ ನ್ಯೂಸ್



**ಸಿಂಧನೂರು: ತಾಲೂಕಿನ ಮಲ್ಕಾಪುರ ಸರಕಾರಿ ಪ್ರೌಢ ಶಾಲೆಯಲ್ಲಿ ವನಸಿರಿ ಪೌಂಡೇಷನ್ ವತಿಯಿಂದ ಗಿಡ ನೆಟ್ಟು ರಾಖಿ ಕಟ್ಟುವ ಮೂಲಕ ವೃಕ್ಷ ಬಂಧನ ಕಾರ್ಯಕ್ರಮ ಅದ್ದೂರಿಯಾಗಿ ಆಚರಿಸಲಾಯಿತು.**

ಈ ಸಂಧರ್ಭದಲ್ಲಿ ವಿದ್ಯಾರ್ಥಿಗಳು ಗಿಡಗಳಿಗೆ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಿ ಗಿಡಗಳನ್ನು ನಮ್ಮಅಣ್ಣತಮ್ಮಂದಿರಂತೆ ನೋಡಿಕೊಳ್ಳಬೇಕು ಎಂದು ರಾಖಿ ಕಟ್ಟುವ ಮೂಲಕ ಪರಿಸರ ಪ್ರೇಮ ಮೆರೆದರು. ಈ ಸಂಧರ್ಭದಲ್ಲಿ ಮುಖ್ಯ ಗುರು ಸಂಗಮೇಶ ಮಾತನಾಡಿ ಪರಿಸರ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಗಿಡಮರಗಳನ್ನು ಪಾಲನೆ ಪೋಷಣೆ ಮಾಡುವುದು ನಮ್ಮೆಲ್ಲರ ಹೊಣೆ. ಪರಿಸರ ಪ್ರೇಮಿ ಅಮರೇಗೌಡ ಮಲ್ಲಾಪುರ ಅವರ ಪರಿಸರ ಪ್ರೇಮ ಅಗಾಧವಾದದು.

ಇಂದು ಗಿಡಗಳಿಗೆ ವಿಶೇಷ ಪೂಜೆ ಸಲ್ಲಿಸಿ ಅಲಂಕಾರ ಮಾಡಿ,ರಾಖಿ ಕಟ್ಟಿ ಗಿಡಗಳು ಕೂಡಾ ನಮ್ಮ ಅಣ್ಣತಮ್ಮಂದಿರಂತೆ ಇದ್ದ ಹಾಗೆ ಎಂದು ರಕ್ಷಾ ಬಂಧನ ಜೊತೆಗೆ ವೃಕ್ಷ ಬಂಧನವಾಗಿ ಆಚರಣೆ ಮಾಡುತ್ತಿರುವುದು ಶ್ಲಾಘನೀಯ ಕಾರ್ಯ.ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆ ಕಾರ್ಯಕ್ಕೆ ವನಸಿರಿ ಪೌಂಡೇಷನ್ ಜೊತೆಗೆ ಸದಾಕಾಲ ಕೈಜೋಡಿಸೋಣ ಎಂದು ತಿಳಿಸಿದರು. ಈ ಸಂಧರ್ಭದಲ್ಲಿ ವನಸಿರಿ ಪೌಂಡೇಷನ್ ಅಧ್ಯಕ್ಷ ಅಮರೇಗೌಡ ಮಲ್ಲಾಪುರ,ಪಂಪಯ್ಯ ಸ್ವಾಮಿ ಪುನೀತಶ್ರಮ,ಶಿಕ್ಷಕರಾದ ವೆಂಕೋಬ ಮಲ್ಲಯ್ಯ,ನಾಗರಾಜ,ರಘು,ಶ್ರೀಮತಿ ಗೀತಾ ಶಿಕ್ಷಕಿ,ಶ್ರೀಮತಿ ರಾಜೇಶ್ವರಿ, ಸುನೀತಾ ಹಾಗೂ ವಿದ್ಯಾರ್ಥಿಗಳು ಇದ್ದರು.

# ಅಂಗವೈಕಲ್ಯ ಮೆಟ್ಟಿ ನಿಂತು ದುಡಿಯುತ್ತಿರುವ ರಾಜಶೇಖರ

## ವಿಬಿಜಿ–ರಾಮ್‌ಜೀ ಉದ್ಯೋಗ ಖಾತರಿ ಯೋಜನೆ ಆಸರೆ ಎಲ್ಲರಿಗೂ ಯೋಜನೆ ಬಳಸಿಕೊಳ್ಳುವಂತೆ ಕರೆ

❑ ನೈಜ್ಯ ದೆಸೆ ನ್ಯೂಸ್



**ಕುಷ್ಟಗಿ: ಅಂಗವೈಕಲ್ಯ ಯಾವುದಕ್ಕೂ ಅಡ್ಡಿಯಲ್ಲ ಎಂಬುದನ್ನು ಸಾಬೀತುಪಡಿಸುತ್ತಿರುವ ಕಡೇಕೊಪ್ಪ ಗ್ರಾಮದ ಯುವಕ ರಾಜಶೇಖರ ಎಂ. ಗಡಾದ ಅವರು, ವಿಬಿಜಿ?ರಾಮ್‌ಜೀ ಉದ್ಯೋಗ ಖಾತರಿ ಯೋಜನೆಯಡಿ ಇತರ ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಾ ಸ್ವಾವಲಂಬನೆಯ ಬದುಕಿನತ್ತ ಹೆಜ್ಜೆ ಹಾಕಿದ್ದಾರೆ.**

ಕಡೇಕೊಪ್ಪ ಗ್ರಾಮದ ಸಮೀಪದ ಮಿಯಾಪುರ ಕೆರೆ ಅಂಗಳದಲ್ಲಿ ನಡೆಯುತ್ತಿರುವ ಉದ್ಯೋಗ ಖಾತರಿ ಕಾಮಗಾರಿಯಲ್ಲಿ ರಾಜಶೇಖರ ಅವರು ಇತರ ಕಾರ್ಮಿಕರೊಂದಿಗೆ ಬೆರೆತು ಕೆಲಸ ಮಾಡುತ್ತಿದ್ದಾರೆ. ಅಂಗವಿಕಲರಾಗಿದ್ದರೂ ತಮ್ಮಿಂದ ಸಾಧ್ಯವಾದ ಕೆಲಸವನ್ನು ಉತ್ಸಾಹದಿಂದ ನಿರ್ವಹಿಸುತ್ತಿರುವುದು ಇತರರಿಗೂ ಪ್ರೇರಣೆಯಾಗಿದೆ. ಕೆಲಸದ ಮಧ್ಯೆ ವಿಶ್ರಾಂತಿ ಸಮಯದಲ್ಲಿ ಮಾತನಾಡಿದ ರಾಜಶೇಖರ ಎಂ. ಗಡಾದ ಅವರು, "ಉದ್ಯೋಗ ಖಾತರಿ ಯೋಜನೆಯ ಕೆಲಸಕ್ಕೆ ಎಲ್ಲರೂ ತಪ್ಪದೇ ಬರಬೇಕು. ಸರ್ಕಾರದ ಯೋಜನೆಗಳನ್ನು ನಾವು ಸದುಪಯೋಗಪಡಿಸಿಕೊಳ್ಳಬೇಕು. ' ಸರಿಯಾದ ಸಮಯಕ್ಕೆ ಕೆಲಸಕ್ಕೆ ಹಾಜರಾಗಬೇಕು. ಈ ಯೋಜನೆ ಎಲ್ಲ–ರಿಗೂ ಉಪಯುಕ್ತವಾಗಿದೆ. ನಮ್ಮಂತಹವ–ರಿಗೂ ಉದ್ಯೋಗದ ಅವಕಾಶ ಕಲ್ಪಿಸಿರುವುದು ಅನುಕೂಲವಾಗಿದೆ" ಎಂದು ಹೇಳಿದರು. ಗ್ರಾಮೀಣ ಜನರಿಗೆ ಸ್ಥಳೀಯವಾಗಿಯೇ ಉದ್ಯೋಗ ಒದಗಿಸುವ ಜೊತೆಗೆ ದುಡಿಯುವ ಮನೋಭಾವ ಬೆಳೆಸುವಲ್ಲಿ ಉದ್ಯೋಗ ಖಾತರಿ ಯೋಜನೆ ಪ್ರಮುಖ ಪಾತ್ರ ವಹಿಸುತ್ತಿದೆ. ವಿಶೇಷವಾಗಿ ಅಂಗವಿಕಲರಿಗೂ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಉದ್ಯೋಗದ ಅವಕಾಶ ದೊರೆಯುತ್ತಿರುವುದು ಯೋಜನೆಯ ಸಾಮಾಜಿಕ ಒಳಗೊಳ್ಳುವಿಕೆಗೆ ಸಾಕ್ಷಿಯಾಗಿದೆ. ಅಂಗವೈಕಲ್ಯವನ್ನು ಲೆಕ್ಕಿಸದೆ ಎಲ್ಲರೊಂದಿಗೆ ಹೆಜ್ಜೆ ಹಾಕಿ ದುಡಿಯುತ್ತಿರುವ ರಾಜಶೇಖರ ಅವರ ಆತ್ಮವಿಶ್ವಾಸ, ಇತರರಿಗೂ ಮಾದರಿಯಾಗಿದೆ.

## ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಬೃಹತ್ ಮಟ್ಟದ ಪಾದಯಾತ್ರೆ: ಪಿ ರಾಜೀವ್

❑ ನೈಜ್ಯ ದೆಸೆ ನ್ಯೂಸ್




**ಮಸ್ಕಿ: ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಪ್ಟೆಂಬರ್ ಒಂದರಿಂದ ಲಿಂಗಸೂರು ನಿಂದ ಆರಂಭಗೊಳ್ಳುವ ಪಾದಯಾತ್ರೆಯ ಕುರಿತು ಪೂರ್ವಭಾವಿ ಸಭೆಯನ್ನು ಮಾಡಲಾಯಿತು.**

ಸಭೆಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ ರಾಜೀವ್ ಸಭೆಯನ್ನು ಉದ್ದೇಶಿ ಮಾತನಾಡಿ ಬೃಹತ್ ಪಾದಯಾತ್ರೆ ಸಪ್ಟಂಬರ್ ಒಂದರಂದು ರಾತ್ರಿ ಸಂತೆಕಲ್ಲೂರಿನಲ್ಲಿ ವಾಸ್ತವ ಊರಲ್ಲಿದ್ದು ನಂತರ ಎರಡನೇ ತಾರೀಕು ಬೆಳಿಗ್ಗೆ 9:00ಗೆ ಸಂತೆಕಲ್ಲೂರಿನಿಂದ ಪಾದಯಾತ್ರೆ ಆರಂಭಗೊಂಡು ಸಂಜೆ ಮಸ್ಕಿಯಲ್ಲಿ ಹಳೆ ಬಸ್ ನಿಲ್ದಾಣದಲ್ಲಿ ಬಿಜೆಪಿಯ ರಾಜ್ಯಾಧ್ಯಕ್ಷರಾದ ಬಿವೈ ವಿಜಯೇಂದ್ರ ಅವರ ನೇತೃತ್ವದಲ್ಲಿ ಬೃಹತ್ ಬಹಿರಂಗ ಸಭೆಯನ್ನು ಮಾಡಲಾಗುತ್ತದೆ ಎಂದು ತಿಳಿಸಿದರು, ಕ್ಷೇತ್ರದಿಂದ 15 ಸಾವಿರಕ್ಕೂ ಹೆಚ್ಚು ಪಕ್ಷದ ಎಲ್ಲಾ ಮುಖಂಡರು ಚುನಾಯಿತ ಜನಪ್ರತಿನಿಧಿಗಳು ಪ್ರಮುಖ ಮಹಿಳೆಯರು ಯುವಕರು ಕಾರ್ಯಕರ್ತರು ಮತ್ತು ಮುಖಂಡರು ಪಾಲ್ಗೊಂಡು ಈ ಬೃಹತ್ ಪಾದಯಾತ್ರೆ ಯಶಸ್ವಿ ಕೊಳಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಶ್ರೀ ಪ್ರತಾಪ್ ಗೌಡ ಪಾಟೀಲ್, ಮಂಡಲ ಅಧ್ಯಕ್ಷ ಶರಣಬಸವ ಸೊಪ್ಪಿಮಠ, ರಾಜ್ಯ ಕಾರ್ಯದರ್ಶಿ ಶರಣು ತಳಿಕೇರಿ, ಬಳ್ಳಾರಿ ವಿಭಾಗೀಯ ಪ್ರಭಾರಿ ಅಮರನಾಥ್ ಪಾಟೀಲ್, ಬಸವಂತರಾಯ ಕುರಿ, ಚಂದ್ರಕಾಂತ್ ಪಾಟೀಲ್, ಪುರಸಭೆ ಅಧ್ಯಕ್ಷ ಸುರೇಶ್ ಅರಸುರು,ಜಗದೀಶ್ ತಾತ ಹಾಲಾಪೂರ,ಪಂಪಣ್ಣ ಗುಂಡಳ್ಳಿ , ಮಲ್ಲಪ್ಪ ಅಂಕಸದೊಡ್ಡಿ, ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಬಸವರಾಜ್ ಗುಡಿಹಾಳ್, ರಮೇಶ್ ಉದ್ಬಾಳ್ ಹಾಗೂ ಮುಖಂಡರು, ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಹೋದರನ ಕೈಗೆ ರಾಖಿ ಕಟ್ಟುವ ದಿನ ಮರಗಳ ಕೈಗೂ ಬಂಧನ!

## ರಕ್ಷಾ ಬಂಧನಕ್ಕೆ ಹೊಸ ಅರ್ಥ ನೀಡಿದ ಮಸ್ಕಿಯ ಧನಗರವಾಡಿ ಶಾಲೆ 'ವೃಕ್ಷ ಬಂಧನ'ದ ಮೂಲಕ ಪರಿಸರ ಉಳಿಸುವ ಸಂಕಲ್ಪ

❑ ನೈಜ್ಯ ದೆಸೆ ನ್ಯೂಸ್



**ಮಸ್ಕಿ: ರಕ್ಷಾ ಬಂಧನ ಎಂದರೆ ಕೇವಲ ಸಹೋದರ?ಸಹೋದರಿಯರ ನಡುವಿನ ಪ್ರೀತಿಯ ಸಂಕೇತವಲ್ಲ; ಪ್ರಕೃತಿಯೊಂದಿಗೆ ನಮ್ಮ ಅವಿನಾಭಾವ ಸಂಬಂಧವನ್ನು ನೆನಪಿಸುವ ದಿನವೂ ಆಗಬಹುದು ಎಂಬ ಸಂದೇಶವನ್ನು ಮಸ್ಕಿಯ ಪಿಎಂ ಶ್ರೀ ಧನಗರವಾಡಿ ಸರ್ಕಾರಿ ಹಿರಿಯ ಪ್ರಾಥ–'ಮಿಕ ಶಾಲೆಯ ವಿದ್ಯಾರ್ಥಿಗಳು ಸಾರಿದರು.**

ರಕ್ಷಾ ಬಂಧನದ ಅಂಗವಾಗಿ ಪ್ರಕೃತಿ ಫೌಂಡೇಶನ್ (ರಿ), ಮಸ್ಕಿ ವತಿಯಿಂದ ಶಾಲಾ ಆವರಣದಲ್ಲಿ ಆಯೋಜಿಸಿದ್ದ ವಿಶಿಷ್ಟ 'ವೃಕ್ಷ ಬಂಧನ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಮರಗಳಿಗೆ ರಾಖಿ ಕಟ್ಟಿ, ಅವುಗಳನ್ನು ಸಂರಕ್ಷಿಸುವ ಸಂಕಲ್ಪ ಮಾಡಿದರು. ಸಹೋದರನ ಮಣಿಕಟ್ಟಿಗೆ ರಾಖಿ ಕಟ್ಟುವ ಬದಲು ಮರದ ಕಾಂಡಕ್ಕೆ ರಾಖಿ ಕಟ್ಟಿದ ಮಕ್ಕಳ ದೃಶ್ಯ ಎಲ್ಲರ ಗಮನ ಸೆಳೆಯಿತು. ಮರಗಳು ಕೇವಲ ನೆರಳು ನೀಡುವ ವಸ್ತುಗಳಲ್ಲ; ಅವು ನಮ್ಮ ಬದುಕಿನ ಅವಿಭಾಜ್ಯ ಸಹಚರರು ಎಂಬ ಅರಿವನ್ನು ಮಕ್ಕಳಲ್ಲಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಕೃತಿ ಫೌಂಡೇಶನ್ ಅಧ್ಯಕ್ಷ ಹಾಗೂ ಗ್ರೀನ್ ಆರ್ಮಿಯ ಶಿವಮೂರ್ತಿ ಗದ್ದಿಮಠ ಅವರು, "ಪರಿಸರ ಸಂರಕ್ಷಣೆ ಸರ್ಕಾರ ಅಥವಾ ಸಂಘ–ಸಂಸ್ಥೆಗಳ ಜವಾಬ್ದಾರಿ ಮಾತ್ರವಲ್ಲ; ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಮರಗಳ ಬಗ್ಗೆ ಪ್ರೀತಿ ಮತ್ತು ಪರಿಸರದ ಬಗ್ಗೆ ಕಾಳಜಿ ಬೆಳೆಸಿದರೆ, ಮುಂದಿನ ಪೀಳಿಗೆ ಹಸಿರು ಪರಿಸರ ನಿರ್ಮಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ" ಎಂದರು.

"ನಾವು ಮರವನ್ನು ರಕ್ಷಿಸಿದರೆ, ನಾಳೆ ಮರ ನಮ್ಮನ್ನು ರಕ್ಷಿಸುತ್ತದೆ. ಮರಗಳನ್ನು ನೆಡುವುದರ ಜೊತೆಗೆ ಅವುಗಳನ್ನು ಮಕ್ಕಳಂತೆ ಕಾಳಜಿಯಿಂದ ಬೆಳೆಸುವ ಮನೋಭಾವ ಪ್ರತಿಯೊಬ್ಬರಲ್ಲೂ ಮೂಡಬೇಕು" ಎಂದು ಅವರು ಕರೆ ನೀಡಿದರು. ಶಾಲೆಯ ಮುಖ್ಯಗುರುಗಳಾದ ಶ್ರೀಮತಿ ಕಾಂತಮ್ಮ ಮಾತನಾಡಿ, ಪಠ್ಯಪುಸ್ತಕದ ಜ್ಞಾನದ ಜೊತೆಗೆ ಮಕ್ಕಳಲ್ಲಿ ಪ್ರಕೃತಿ ಮತ್ತು ಪರಿಸರದ ಬಗ್ಗೆ ಜವಾಬ್ದಾರಿ ಬೆಳೆಸುವುದು ಶಾಲೆಯ ಪ್ರಮುಖ ಕರ್ತವ್ಯವಾಗಿದೆ. ರಕ್ಷಾ ಬಂಧನದಂತಹ ಹಬ್ಬವನ್ನು ಪರಿಸರ ಸಂರಕ್ಷಣೆಯ ಸಂದೇಶದೊಂದಿಗೆ ಆಚರಿಸುವ ಮೂಲಕ ಮಕ್ಕಳಲ್ಲಿ ಪ್ರಕೃತಿ ಪ್ರೀತಿ ಮೂಡಿಸುವ ಉದ್ದೇಶದಿಂದ 'ವೃಕ್ಷ ಬಂಧನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ರಾಖಿ ಕಟ್ಟುವುದಷ್ಟೇ ಅಲ್ಲ ಮರ ಬೆಳೆಸುವ ಸಂಕಲ್ಪ ಮರಕ್ಕೆ ರಾಖಿ ಕಟ್ಟುವುದೇ ಕಾರ್ಯಕ್ರಮದ ಅಂತ್ಯವಲ್ಲ. "ಈ ಮರವನ್ನು ರಕ್ಷಿಸುತ್ತೇವೆ, ಬೆಳೆಸುತ್ತೇವೆ, ಯಾರೂ ಹಾನಿ ಮಾಡದಂತೆ ನೋಡಿಕೊಳ್ಳುತ್ತೇವೆ" ಎಂಬ ಜವಾಬ್ದಾ–ರಿಯ ಮನೋಭಾವ ಬೆಳೆಸುವುದೇ 'ವೃಕ್ಷ ಬಂಧನ'ದ ನಿಜವಾದ ಉದ್ದೇಶವಾಗಿದೆ. ಮರಗಳು ಆಮ್ಲಜನಕ, ನೆರಳು, ಹಣ್ಣು ಹಾಗೂ ಪರಿಸರ ಸಮತೋಲನಕ್ಕೆ ಅಗತ್ಯವಾದ ಅನೇಕ ಕೊಡುಗೆಗಳನ್ನು ನೀಡುತ್ತವೆ. ಮರಗಳ ಸಂಖ್ಯೆ ಕಡಿಮೆಯಾಗುತ್ತಿರುವ ಇಂದಿನ ಸಂದರ್ಭದಲ್ಲಿ ಮಕ್ಕಳಲ್ಲೇ ಪರಿಸರ ಪ್ರೀತಿಯ ಬೀಜ ಬಿತ್ತುವುದು ಅತ್ಯಂತ ಅಗತ್ಯವಾಗಿದೆ.

ಶಾಲಾ ಆವರಣದಲ್ಲಿ ಮಕ್ಕಳ ಕೈಗಳಿಂದ ಮರಗಳಿಗೆ ಕಟ್ಟಲಾದ ರಾಖಿಗಳು, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಅವಿನಾಭಾವ ಸಂಬಂಧದ ಸಂಕೇತವಾಗಿ ಕಂಗೊಳಿಸಿದವು. "ಮರ ಉಳಿಸಿ ಭವಿಷ್ಯ ಉಳಿಸಿ" ಎಂಬ ಸಂದೇಶದೊಂದಿಗೆ ರಕ್ಷಾ ಬಂಧನದಂದು ಮನುಷ್ಯನನ್ನು ಮಾತ್ರವಲ್ಲ, ಪ್ರಕೃತಿಯನ್ನೂ ರಕ್ಷಿಸುವ ಸಂಕಲ್ಪ ಮಾಡಿದ ಧನಗರವಾಡಿ ಶಾಲೆಯ ಮಕ್ಕಳು ಸಮಾಜಕ್ಕೆ ವಿಭಿನ್ನ ಹಾಗೂ ಅರ್ಥಪೂರ್ಣ ಸಂದೇಶ ನೀಡಿದರು.

ಮಕ್ಕಳ ಕೈಯಲ್ಲಿದ್ದ ರಾಖಿ ಕೇವಲ ಒಂದು ದಾರಿಯಾಗಿರಲಿಲ್ಲ; ಅದು ಪ್ರಕೃತಿಯೊಂದಿಗೆ ಮಾಡಿಕೊಂಡ ರಕ್ಷಣೆಯ ಒಪ್ಪಂದವಾಗಿತ್ತು. ಇಂದು ಒಂದು ಮರಕ್ಕೆ ಕಟ್ಟಿದ ರಾಖಿ, ನಾಳೆ ಸಾವಿರಾರು ಮರಗಳನ್ನು ಉಳಿಸುವ ಪರಿಸರ ಜಾಗೃತಿಗೆ ಕಾರಣವಾಗಲಿ ಎಂಬ ಆಶಯ 'ವೃಕ್ಷ ಬಂಧನ' ಕಾರ್ಯಕ್ರಮದ ಮೂಲಕ ಮೂಡಿಬಂತು.

## ಸಾಹಿತ್ಯ ಸಿಂಚನ

### ಕಳೆದುಹೋದ ಕ್ಷಣಗಳ ಹುಡುಕಾಟ

ಕಳೆದುಹೋದ ಕ್ಷಣಗಳ ಹುಡುಕಾಟದಲ್ಲಿ,
ಕಾಲದ ಹೆಜ್ಜೆ ಗುರುತುಗಳನು ಹುಡುಕಿದೆನು?
ಮರೆಯಾದ ನಗುವಿನ ನೆನಪುಗಳಲ್ಲಿ,
ಮತ್ತೆ ಬಾಲ್ಯದ ದಿನಗಳನು ಕಂಡೆನು?

ಒಮ್ಮೆ ಜೊತೆಯಾಗಿ ನಡೆದ ದಾರಿಗಳು,
ಇಂದು ಮೌನವಾಗಿ ನನ್ನನು ಕರೆಯುತ್ತಿವೆ?
ಹಂಚಿಕೊಂಡ ಮಾತಿನ ಸಿಹಿ ನೆನಪುಗಳು,
ಮನದೊಳಗೆ ಮತ್ತೆ ಜೀವಿಸುತ್ತಿವೆ?

ಕೈತಪ್ಪಿದ ಆ ಸುಂದರ ಸಮಯ,
ಮತ್ತೆ ಮರಳಿ ಬರುವುದೆಂದು ಕಾಯುವೆನು?
ಹೋದ ದಿನಗಳ ನೆರಳಿನ ಹಿಂದೆ,
ನನ್ನದೇ ನಗುವನ್ನು ಹುಡುಕುವೆನು?


ಕಾಲವೆಂಬ ನದಿಯ ನೀರಿನಲ್ಲಿ,
ಎಷ್ಟೋ ಕನಸುಗಳು ಕೊಚ್ಚಿಹೋದವು?
ಆದರೂ ನೆನಪುಗಳ ದಡದಲ್ಲಿ,
ಅವುಗಳ ಗುರುತುಗಳು ಉಳಿದವು?

ಕಳೆದುಹೋದ ಕ್ಷಣಗಳು ಸಿಗದಿದ್ದರೂ,
ಅವು ನೀಡಿದ ನೆನಪುಗಳು ಸಾಕು?
ನಿನ್ನೆ ಮರಳದಿದ್ದರೂ ಪರವಾಗಿಲ್ಲ,
ಇಂದು ಹೊಸ ನೆನಪುಗಳನ್ನು ಕಟ್ಟೋಣ ಸಾಕು

## ಯಾದಗಿರಿ ಜಿಲ್ಲೆಯ ಪ್ರೊಫೆಸರ್ ಪಿ ಕೃಷ್ಣಪ್ಪ ಬಣ್ಣದ ಜಿಲ್ಲಾ ಸಂಚಾಲಕರಾದ ಮಡಿವಾಳಪ್ಪ ಕಟ್ಟಿಮನಿಯುವರು ಸರಕಾರದ ವಿರುದ್ಧ ಹರಿಹೈದರು

❏ ನೈಜ್ಯ ದೆಸೆ ನ್ಯೂಸ್

**ಯಾದಗಿರಿ; ಜಿಲ್ಲೆಯಲ್ಲಿ ಸಾಕಷ್ಟು ತಾಲೂಕುಗಳು ಬರಗಾಲವಿದ್ದು. ಅದರಲ್ಲಿ ಶಹಾಪುರ ತಾಲೂಕು ಒಂದೇ ಬರಗಾಲ ಅಂತ ಘೋಷಿಸುವುದು ಸರ್ಕಾರ ಯಾವ ಲೆಕ್ಕ. ಯಾದಗಿರಿ ಜಿಲ್ಲೆಯಲ್ಲಿ ಆರು ತಾಲೂಕುಗಳು ಬರುತ್ತವೆ.**



ಅದರಲ್ಲಿ ಎಲ್ಲಾ ತಾಲೂಕುಗಳು ಅರ್ಧ ನೀರಾವರಿ ಪ್ರದೇಶ ಇದ್ದಾವೆ. ಇದರಲ್ಲಿ ಯಾವ ಬೆಳೆ ಇದೆ ಅಂತ ಹೇಳಿ ಕಂದಾಯ ಇಲಾಖೆಯವರು ಯಾವ ರೀತಿ ಸರ್ವೆ ಮಾಡಿದ್ದಾರೆ ಅನ್ನುವುದೇ ನಮಗೆ ಗೊತ್ತಾಗುತ್ತೆ ಇಲ್ಲ ಎಂದು ಹೇಳಿ ಆಕ್ರೋಶ ವ್ಯಕ್ತಪಡಿಸಿದರು. ಮತ್ತೆ ಸರ್ಕಾರ ಮುಂದಿನ ಎರಡು ದಿನಗಳಲ್ಲಿ. ಯಾದಗಿರಿ ಜಿಲ್ಲಾಧಿಕಾರಿಗಳನ್ನು .ತಾಲೂಕು ದಂಡಾಧಿಕಾರಿಗಳನ್ನು. ಮತ್ತು ವಿಲೇಜ್ ಅಕೌಂಟೆಂಟ್ ಗಳನ್ನು ಪುನ ಎಲ್ಲಾ ತಾಲೂಕುಗಳ ರೈತರ ಹೊಲಗಳಿಗೆ ಕಳಿಸಿ ಬೆಳೆ ಸಮೀಕ್ಷೆಯನ್ನು ಮಾಡಿ. ಬರಗಾಲವೆಂದು ಘೋಷಿಸಬೇಕು. ಒಂದು ವೇಳೆ ಬರಗಾಲವೆಂದು ಘೋಷಿಸದಿದ್ದರೆ. ರಾಜ್ಯ ಹೆದ್ದಾರಿ. ಬೀದರ. ಟು. ಶ್ರೀರಂಗಪಟ್ಟಣ ರಸ್ತೆಯನ್ನು ತಡೆದು ಉಗ್ರ ಹೋರಾಟ ಮಾಡಲಾಗುವುದೆಂದು ಹೆಸರಿಸಿದರು ಹಾಗೆ ಜಿಲ್ಲಾಡಳಿತದ ವೈಫಲ್ಯವನ್ನು ರೈತರ ಮೇಲೆ ಎದ್ದು ಕಾಣುತ್ತಿದೆ. ಜಿಲ್ಲಾಡಳಿತ ಕೂಡಲೇ ಎಚ್ಚೆತ್ತುಕೊಳ್ಳಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂದರ್ಭದಲ್ಲಿ. ಅನೇಕ ರೈತರು ಮತ್ತು ಚಿಂತಕರು ಹಾಗೂ ವಿವಿಧ ಸಂಘಟನೆ ಮುಖಂಡರು ಪಾಲ್ಗೊಂಡಿದ್ದರು

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ರಾಯಚೂರು ತಾಲೂಕನ್ನು ತೀವ್ರಬರಪೀಡಿತ ಪ್ರದೇಶವೆಂದು ಮರುಪರಿಶೀಲಿಸಿ ಘೋಷಿಸಬೇಕು–ಮುಜಾಹಿದ್ ಮರ್ಚೆಡ್

❏ ನೈಜ್ಯ ದೆಸೆ ನ್ಯೂಸ್

**ಸರ್ಕಾರ ಮಧ್ಯಮ ಪ್ರಮಾಣದ ಬರಪೀಡಿತ ಪ್ರದೇಶವೆಂದು ಘೋಷಿಸಿರುವುದು ವಾಸ್ತವ ಪರಿಸ್ಥಿತಿಗೆ ವಿರುದ್ಧವಾಗಿದೆ. ಅಧಿಕಾರಿಗಳ ನಿರ್ಲಕ್ಷ್ಯ ಹಾಗೂ ನೈಜ ಪರಿಸ್ಥಿತಿಯ ಸಮರ್ಪಕ ಪರಿಶೀಲನೆಯ ಕೊರತೆಯಿಂದಾಗಿ ರಾಯಚೂರು ತಾಲೂಕು ತೀವ್ರ ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಹೊರಗುಳಿದಿದೆ ಎಂದು ಕರ್ನಾಟಕ ರೈತ ಸಂಘ ಹಾಗೂ ರೈತ ಸೇನೆ (ರಿ) ರಾಯಚೂರು ಜಿಲ್ಲಾ ಕಾರ್ಯಾಧ್ಯಕ್ಷರು ಆದ ಮುಜಾಹಿದ್ ಮರ್ಚೆಡ್ ಆರೋಪಿಸಿದ್ದಾರೆ.**



ಈ ಕುರಿತು ಮಾತನಾಡಿದ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಮುಜಾಹಿದ್ ಮರ್ಚೆಡ್, "ರಾಯಚೂರು ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಮಳೆಯ ಕೊರತೆಯಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅನೇಕ ಕಡೆ ಬಿತ್ತನೆ ಮಾಡಿದ ಬೀಜಗಳು ಮೊಳಕೆಯೇ ಬರದೆ ಹೋಗಿವೆ. ಕೆಲವು ರೈತರು ಎರಡು ಬಾರಿ ಬಿತ್ತನೆ ಮಾಡಿದರೂ ಮಳೆ ಕೈಕೊಟ್ಟ ಪರಿಣಾಮ ಬೆಳೆಗಳು ಒಣಗಿ ಸಂಪೂರ್ಣ ನಷ್ಟವಾಗಿವೆ, ಇನ್ನೂ ಕೆಲ ರೈತರು ಒಣಗಿದ ಬೆಳೆಯನ್ನು ನಾಶಮಾಡಿದ್ದಾರೆ, ಸುಮಾರು 95% ಪ್ರದೇಶದಲ್ಲಿ ಬೆಳೆಗಳು ಮಳೆಯ ಕೊರತೆಯಿಂದ ಹಾನಿಗೊಳಗಾಗಿವೆ" ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಅಜಯ್ ಸಿಂಗ್ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಕೃಷಿ ಇಲಾಖೆಯ ಅಧಿಕಾರಿಗಳು ರಸ್ತೆ ಬದಿಯಲ್ಲಿರುವ ಅಲ್ಪ ಪ್ರಮಾಣದ ಉತ್ತಮ ಸ್ಥಿತಿಯಲ್ಲಿದ್ದ ಹೊಲಗಳನ್ನು ಮಾತ್ರ ತೋರಿಸಿ, ತಾಲೂಕಿನ ನೈಜ ಬರ ಪರಿಸ್ಥಿತಿಯನ್ನು ಮರೆಮಾಚಿದ್ದಾರೆ ಎಂಬ ಆರೋಪ ಕೇಳಿಬಂದಿದೆ. "ರಸ್ತೆ ಪಕ್ಕದಲ್ಲಿರುವ ಹೊಲಗಳನ್ನು ಮಾತ್ರ ಪರಿಶೀಲಿಸುವುದರಿಂದ ರೈತರ ನೈಜ ಸಂಕಷ್ಟ ತಿಳಿಯುವುದಿಲ್ಲ. ರಸ್ತೆ ಸಂಪರ್ಕವಿಲ್ಲದ ಒಳಪ್ರದೇಶಗಳಿಗೆ ತೆರಳಿ, ಹಳ್ಳ–ಕೊಳ್ಳ, ತಗ್ಗು–ಮಿಟ್ಟು ಪ್ರದೇಶಗಳನ್ನು ದಾಟಿ ರೈತರ ಹೊಲಗಳನ್ನು ನೇರವಾಗಿ ಪರಿಶೀಲಿಸಬೇಕಾಗುತ್ತದೆ. ಆದರೆ ಜಂಟಿ ಕೃಷಿ ನಿರ್ದೇಶಕರು, ತಾಲೂಕ ಕೃಷಿ ನಿರ್ದೇಕರು ಹಾಗೂ ಕೃಷಿ ಅಧಿಕಾರಿಗಳು ಸೂಟು–ಬೂಟು ಧರಿಸಿ ರಸ್ತೆ ಬದಿಯ ಹೊಲಗಳನ್ನಷ್ಟೇ ತೋರಿಸಿ ವಾಸ್ತವ ಪರಿಸ್ಥಿತಿಯನ್ನು ಮರೆಮಾಚಿರುವುದು ರೈತರಿಗೆ ಮಾಡಿರುವ ಅನ್ಯಾಯವಾಗಿದೆ" ಎಂದು ಮುಜಾಹಿದ್ ಮರ್ಚೆಡ್ ಆಕ್ರೋಶ ವ್ಯಕ್ತಪಡಿಸಿದರು.

ರಾಯಚೂರು ತಾಲೂಕಿನ ಪ್ರತಿಯೊಂದು ಹೋಬಳಿ ಹಾಗೂ ಗ್ರಾಮಗಳಲ್ಲಿ ರಸ್ತೆ ಬದಿಯ ಹೊಲಗಳನ್ನು ಮಾತ್ರವಲ್ಲದೆ, ಒಳಪ್ರದೇಶದಲ್ಲಿರುವ ರೈತರ ಹೊಲಗಳಿಗೂ ತೆರಳಿ ಸಮಗ್ರ ಬೆಳೆ ಸಮೀಕ್ಷೆ ನಡೆಸಬೇಕು. ಮಳೆಯ ಪ್ರಮಾಣ, ಬಿತ್ತನೆ ವಿಫಲತೆ, ಮೊಳಕೆ ಪ್ರಮಾಣ, ಬೆಳೆ ಒಣಗುವಿಕೆ, ಮಣ್ಣಿನ ತೇವಾಂಶ ಹಾಗೂ ರೈತರಿಗೆ ಉಂಟಾದ ನಷ್ಟವನ್ನು ವೈಜ್ಞಾನಿಕವಾಗಿ ದಾಖಲಿಸಿ ನೈಜ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಆದ್ದರಿಂದ ಜಿಲ್ಲಾಧಿಕಾರಿಗಳು ತಕ್ಷಣ ವಿಶೇಷ ತಂಡ ರಚಿಸಿ ರಾಯಚೂರು ತಾಲೂಕಿನಾದ್ಯಂತ ಮರುಪರಿಶೀಲನೆ ನಡೆಸಿ, ವಾಸ್ತವಾಂಶ ಆಧಾರಿತ ವರದಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕು. ನೈಜ ಪರಿಸ್ಥಿತಿಯನ್ನು ಪರಿಶೀಲಿಸದೆ ತಪ್ಪು ವರದಿ ನೀಡಿರುವುದು ತನಿಖೆಯಲ್ಲಿ ಸಾಬೀತಾದರೆ ಸಂಬಂಧಿಸಿದ ಕೃಷಿ ಅಧಿಕಾರಿಗಳ ವಿರುದ್ಧ ಸೂಕ್ತ ಇಲಾಖಾ ಹಾಗೂ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಅಲ್ಲದೆ, ರಾಯಚೂರು ತಾಲೂಕನ್ನು ಕೇವಲ ಮಧ್ಯಮ ಬರಪೀಡಿತ ಪ್ರದೇಶ ಎಂದು ಪರಿಗಣಿಸಿರುವ ನಿರ್ಧಾರವನ್ನು ಮರುಪರಿಶೀಲಿಸಿ, ನೈಜ ಬೆಳೆ ನಷ್ಟ ಹಾಗೂ ಬರ ಪರಿಸ್ಥಿತಿಯ ಆಧಾರದ ಮೇಲೆ ತೀವ್ರ ಬರಪೀಡಿತ ತಾಲೂಕು ಎಂದು ಘೋಷಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂದು ಆಗ್ರಹಿಸಿದರು. ರಾಯಚೂರು ತಾಲೂಕಿನ ಜನಪ್ರತಿನಿಧಿಗಳು ಕೂಡ ರೈತರ ನೈಜ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದು, ತೀವ್ರ ಬರಪೀಡಿತ ತಾಲೂಕು ಘೋಷಣೆ ಹಾಗೂ ಸಮರ್ಪಕ ಬರ ಪರಿಹಾರಕ್ಕಾಗಿ ಒತ್ತಡ ತರಬೇಕು. ಈ ವಿಚಾರದಲ್ಲಿ ಎಲ್ಲಾ ಪಕ್ಷಗಳ ಜನಪ್ರತಿನಿಧಿಗಳ ನಿರ್ಲಕ್ಷ್ಯವೂ ಎದ್ದು ಕಾಣುತ್ತಿದೆ ಎಂದು ಮುಜಾಹಿದ್ ಮರ್ಚೆಡ್ ಆರೋಪಿಸಿದರು.

## ಈದ್ ಮೀಲಾದ್: ರೋಗಿಗಳಿಗೆ ಹಣ್ಣು ಹಂಪಲ ವಿತರಣೆ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಈದ್ ಮಿಲಾದ್ ಹಬ್ಬದ ನಿಮಿತ್ಯವಾಗಿ ಸೀರತ್ ಯಂಗ್ ಕಮೀಟಿ ವತಿಯಿಂದ ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರದ ಒಳ ಹಾಗು ಹೊರ ರೋಗಿಗಳಿಗೆ ಹಣ್ಣು ಹಂಪಲುಗಳನ್ನು ಶುಕ್ರವಾರ ವಿತರಿಸಲಾಯಿತು.**



ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಾದ ಡಾ.ಎ.ಜಿ.ಬಿರಾದಾರ ಅವರು ಮಾತನಾಡಿ ಜಗತ್ತಿಗೆ ಬಂದ ಎಲ್ಲಾ ಶರಣರು ಮಹಾಪುರುಷರು ಶಾಂತಿ ಮತ್ತು ಪ್ರೀತಿಯ ಸಂದೇಶವನ್ನೇ ಕೊಟ್ಟಿದ್ದಾರೆ ಆದರೆ ಅದನ್ನು ತಿಳಿದುಕೊಳ್ಳುವಲ್ಲಿ ನಾವು ವಿಫಲರಾಗುತ್ತಿದ್ದೇವೆ. ನಾವೆಲ್ಲರೂ ಭಾರತೀಯರು ನಾವೆಲ್ಲರೂ ಒಂದು ಎಂಬ ಭಾವನೆಯೊಂದಿಗೆ ಬದುಕುವ ಅಗತ್ಯವಿದೆ ಎಂದು ಹೇಳಿದ ಅವರು ಮಹಮ್ಮದ್ ಪ್ರವಾದಿಗಳ ಜನ್ಮದಿನದ ಸಂದರ್ಭದಲ್ಲಿ ಇಂತಹ ಪುಣ್ಯದ ಕಾರ್ಯಗಳನ್ನು ಮಾಡುತ್ತಿರುವುದು ಸಂತೋಷದ ವಿಷಯವಾಗಿದೆ.

ನಾನು ಈ ಸಂಘಟನೆಯ ಎಲ್ಲ ಪದಾಧಿಕಾರಿಗಳಿಗೆ ಅಭಿನಂದಿಸುತ್ತೇನೆ ಎಂದರು. ಸೀರತ್ ಕಮಿಟಿಯ ಪ್ರಮುಖರಾದ ನದೀಮ ಕಡು ಹಾಗೂ ಪೀರ ಮೊಹಮ್ಮದ್ ಖಾಜಿ ಅವರು ಮಾತನಾಡಿ ಕಳೆದ 14 ವರ್ಷಗಳಿಂದ ಈದ್ ಮೀಲಾದ್ ಹಬ್ಬದ ಸಂದರ್ಭದಲ್ಲಿ ನಾವು ಇಂತಹ ಸೇವ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ, ಮುಂದಿನ ವರ್ಷ ಬಡವರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಇಂದಿನ ಈ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳಿಗೆ ಹಾಗೂ ಅವರ ಸಿಬ್ಬಂದಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇವೆ ಎಂದರು. ಕಾರ್ಯಕ್ರಮದಲ್ಲಿ ಅರವಳಿಕೆ ತಜ್ಞೆ ಡಾ.ವಿಜಯಲಕ್ಷ್ಮಿ ಹಜೇರಿ, ಶಸ್ತ್ರ ಚಿಕಿತ್ಸಕ ಡಾ.ಸಾಗರ ಸಿದ್ದನಗೌಡ ಪಾಟೀಲ, ನರ್ಸಿಂಗ್ ಆಫೀಸರ್ ಮಹೆಬೂಬ ನಡುವಿನಮನಿ, ಫಾರ್ಮಸಿ ಅಧಿಕಾರಿ ಎನ್.ಬಿ.ಪಾಟೀಲ, ಗೃಹರಕ್ಷಕ ದಳದ ನಿವೃತ್ತ ಅಧಿಕಾರಿ ಶರಣಗೌಡ ಪಾಟೀಲ, ಸೀರತ್ ಕಮೀಟಿ ಪದಾಧಿಕಾರಿಗಳಾದ ಮದಾರಶಾ ಮಕಾನದಾರ, ನಬಿಸಾಬ ಜಾಲಿಬೆಂಚಿ, ಮುಸ್ತಫಾ ಬಶಟ್ಟಿಹಾಳ, ಬಾಬುಸಾಬ ಬಿಳ್ವಾರ, ಶಮಶುದ್ದೀನ ಮಕಾನದಾರ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಪೊಲೀಸ್ ಸಿಬ್ಬಂದಿಗಳಿಗೆ ರಾಖಿ ಕಟ್ಟಿ ರಕ್ಷಾ ಬಂಧನ ಆಚರಿಸಿದ ಆನಂದ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಆನಂದ ಪಬ್ಲಿಕ್ ಶಾಲೆಯ ಮಕ್ಕಳು, ಕರ್ತವ್ಯ ನಿರತರಾದ ಪೊಲೀಸ್ ಸಿಬ್ಬಂದಿಗಳಿಗೆ ರಾಖಿ ಕಟ್ಟುವ ಮೂಲಕ ಪವಿತ್ರ ರಕ್ಷಾ ಬಂಧನ ಹಬ್ಬವನ್ನು ಅತ್ಯಂತ ಅರ್ಥಪೂರ್ಣವಾಗಿ ಹಾಗೂ ಹೃದಯಸ್ಪರ್ಶಿಯಾಗಿ ಆನಂದ ಪಬ್ಲಿಕ್ ಶಾಲೆಯ ಮಕ್ಕಳು ಆಚರಿಸಿದರು.**

ಈ ರಕ್ಷಾ ಬಂಧನ ಹಬ್ಬದ ಆಚರಣೆಯ ಅಂಗವಾಗಿ ಆನಂದ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಕರ್ತವ್ಯ ನಿರತರಾದ ಪೊಲೀಸ್ ಸಿಬ್ಬಂದಿಗಳನ್ನು ಭೇಟಿ ಮಾಡಿ, ಸಮಾಜದ ಸುರಕ್ಷತೆಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ರಾಖಿ ಕಟ್ಟಿ ಕೃತಜ್ಞತೆ ಮತ್ತು ಗೌರವವನ್ನು ಸಲ್ಲಿಸಿದರು.

ಈ ರಕ್ಷಾ ಬಂಧನವು ಪ್ರೀತಿ, ರಕ್ಷಣೆ, ಗೌರವ ಮತ್ತು ಜವಾಬ್ದಾರಿಯ ಸುಂದರ ಬಾಂಧವ್ಯ ಪ್ರತಿಬಿಂಬಿಸಿತು. ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು, ಸಾರ್ವಜನಿಕರ ಸುರಕ್ಷತೆ ಹಾಗೂ ಭದ್ರತೆಯನ್ನು ಖಚಿತಪಡಿಸುವಲ್ಲಿ ಪೊಲೀಸ್ ಸಿಬ್ಬಂದಿ ಸಲ್ಲಿಸುತ್ತಿರುವ ನಿರಂತರ ಸೇವೆಯನ್ನು ವಿದ್ಯಾರ್ಥಿಗಳು ಗೌರವಿಸಿದರು. ಪೊಲೀಸ್ ಅಧಿಕಾರಿಗಳು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಜವಾಬ್ದಾರಿಯುತ, ಶಿಸ್ತಿನ ಹಾಗೂ ಕಾಳಜಿಯುಳ್ಳ ನಾಗರಿಕರಾಗುವಂತೆ ಪ್ರೋತ್ಸಾಹಿಸಿದರು.

ಈ ಆಚರಣೆಯ ಮೂಲಕ ಸಮಾಜದ ರಕ್ಷಣೆ ಮತ್ತು ಶಾಂತಿ ಕಾಪಾಡುವಲ್ಲಿ ಪೊಲೀಸ್ ಇಲಾಖೆ ಮಹತ್ವದ ಪಾತ್ರವನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ ದೊರೆಯಿತು. ಆನಂದ ಪಬ್ಲಿಕ್ ಶಾಲೆಯ ಈ ವಿಶೇಷ ಉಪಕ್ರಮವನ್ನು ಪೊಲೀಸ್ ಸಿಬ್ಬಂದಿಗಳು ಕೂಡ ಮೆಚ್ಚಿಕೊಂಡು ವಿದ್ಯಾರ್ಥಿಗಳಿಗೆ ಶುಭಾಶಯಗಳನ್ನು ಕೋರಿದರು.




ಈ ರಕ್ಷಾ ಬಂಧನದಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ, ಸಾರ್ವಜನಿಕ ಸೇವಕರ ಬಗ್ಗೆ ಗೌರವ ಹಾಗೂ ಮೌಲ್ಯಗಳ ಬಗ್ಗೆ ಉತ್ತಮ ಅರಿವನ್ನು ಬೆಳೆಸಲು ಸಹಕಾರಿಯಾಗುತ್ತವೆ. ವಿದ್ಯಾರ್ಥಿಗಳು ಹಾಗೂ ಪೊಲೀಸ್ ಇಲಾಖೆಯ ನಡುವಿನ ಪರಸ್ಪರ ಗೌರವ, ಸಹೋದರತ್ವ ಹಾಗೂ ಸೌಹಾರ್ದತೆಯ ಸಂದೇಶವನ್ನು ಸಾರುವ ಮೂಲಕ ರಕ್ಷಾ ಬಂಧನ ಕಾರ್ಯಕ್ರಮವು ಯಶಸ್ವಿಯಾಯಿತು ಎಂದು ಶಾಲಾ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರಾದ ಮಲ್ಲಿಕಾರ್ಜುನ ಅಂಗಡಿ ತಿಳಿಸಿದರು.

## ರೈತರ ಜಮೀನು ಖರೀದಿ ಇಲ್ಲ, ಸದ್ಯಕ್ಕೆ ಕೇವಲ ಸಮೀಕ್ಷೆ: ಕಾಂಗ್ರೆಸ್ ಮುಖಂಡ ರವಿ ಬೋಸರಾಜ್

❏ ನೈಜ್ಯ ದೆಸೆ ನ್ಯೂಸ್

**ಜಾಲಹಳ್ಳಿ: (ರಾಯಚೂರು ಜಿಲ್ಲೆ), ಆ.28: ದೇವದುರ್ಗ ತಾಲ್ಲೂಕಿನ ಜಾಲಹಳ್ಳಿ ಸಮೀಪದ ಲಿಂಗದಹಳ್ಳಿ ಗ್ರಾಮದ ಶ್ರೀ ಪರಮಾನಂದ ದೇವಸ್ಥಾನದ ಗುಡ್ಡ ಪ್ರದೇಶದಲ್ಲಿ ಚಿನ್ನ ಹಾಗೂ ತಾಮ್ರದ ನಿಕ್ಷೇಪಗಳಿರುವ ಸಾಧ್ಯತೆ ಹಿನ್ನೆಲೆಯಲ್ಲಿ ಕೈಗೊಳ್ಳಲಾಗುತ್ತಿರುವ ವೈಜ್ಞಾನಿಕ ಸಮೀಕ್ಷೆ ಹಾಗೂ ಪರಿಶೋಧನಾ ಕಾರ್ಯಕ್ಕೆ ತೆಲಂಗಾಣ ರಾಜ್ಯದ ಉಪಮುಖ್ಯಮಂತ್ರಿ ಭಟ್ಟಿ ವಿಕ್ರಮಾರ್ಕ ಅವರು ಶುಕ್ರವಾರ ಚಾಲನೆ ನೀಡಿದರು.**

ಸಿಂಗರೇಣಿ ಕಾಲರೀಸ್ ಲಿಮಿಟೆಡ್ ಸಂಸ್ಥೆಯ ವತಿಯಿಂದ ಸಮೀಕ್ಷೆ ಮತ್ತು ಪರಿಶೋಧನಾ ಕಾರ್ಯ ನಡೆಯಲಿದ್ದು, ಲಿಂಗದಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶದ ಭೂಗರ್ಭದಲ್ಲಿ ಚಿನ್ನ ಮತ್ತು ತಾಮ್ರದ ಅದಿರು ಇರುವಿಕೆಯ ಸಾಧ್ಯತೆ, ಪ್ರಮಾಣ, ಗುಣಮಟ್ಟ ಹಾಗೂ ಭೂಗರ್ಭದ ರಚನೆಯನ್ನು ವೈಜ್ಞಾನಿಕ ವಿಧಾನಗಳ ಮೂಲಕ ಪರಿಶೀಲಿಸಲಾಗುತ್ತದೆ. ಮೂರು ವರ್ಷಗಳ ಕಾಲ ಸಮಗ್ರ ಪರಿಶೋಧನೆ ಸಮೀಕ್ಷಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದ ಭಟ್ಟಿ ವಿಕ್ರಮಾರ್ಕ ಅವರು, ಈ ಪ್ರದೇಶದಲ್ಲಿ ಎಷ್ಟರಮಟ್ಟಿಗೆ ಚಿನ್ನ ಮತ್ತು ತಾಮ್ರದ ನಿಕ್ಷೇಪಗಳಿವೆ ಎಂಬುದನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಲು ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ವಿವಿಧ ಹಂತಗಳಲ್ಲಿ ಸಮಗ್ರ ಪರಿಶೋಧನೆ ನಡೆಸಲಾಗುವುದು ಎಂದು ತಿಳಿಸಿದರು.

ಪರಿಶೋಧನೆಯಿಂದ ದೊರೆಯುವ ಮಾಹಿತಿಯನ್ನು ಆಧರಿಸಿ ಅಂತಿಮ ವರದಿ ಸಿದ್ಧಪಡಿಸಿ ಸಂಬಂಧಿಸಿದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಸಲ್ಲಿಸಲಾಗುವುದು. ಸದ್ಯ ನಡೆಯುತ್ತಿರುವುದು ಕೇವಲ ನಿಕ್ಷೇಪ ಪತ್ತೆ ಮತ್ತು ವೈಜ್ಞಾನಿಕ ಪರಿಶೋಧನೆಯ ಹಂತವಾಗಿದ್ದು, ತಕ್ಷಣವೇ ಗಣಿಗಾರಿಕೆ ಆರಂಭಿಸುವ ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ ಎಂದು ಅವರು ಸ್ಪಷ್ಟಪಡಿಸಿದರು. ಪರಿಶೋಧನೆಯ ನಂತರ ವಾಣಿಜ್ಯಿಕವಾಗಿ ಗಣಿಗಾರಿಕೆ ನಡೆಸಲು ಯೋಗ್ಯ ಪ್ರಮಾಣದ ಖನಿಜ ನಿಕ್ಷೇಪಗಳು ಪತ್ತೆಯಾದಲ್ಲಿ ಮಾತ್ರ ಮುಂದಿನ ಹಂತದ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಹೇಳಿದರು.



**ಮೂರು ವರ್ಷ ಕೇವಲ ಸಮೀಕ್ಷೆ; ರೈತರ ಜಮೀನು ಖರೀದಿ ಇಲ್ಲ: ರವಿ ಬೋಸರಾಜ್**

**ಕಾರ್ಯಕ್ರಮದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ರವಿ ಬೋಸರಾಜ್ ಅವರು, ಸಿಂಗರೇಣಿ ಕಾಲರೀಸ್ ಸಂಸ್ಥೆಗೆ ಮೂರು ವರ್ಷಗಳ ಕಾಲ ಈ ಪ್ರದೇಶದಲ್ಲಿ ಕೇವಲ ಸಮೀಕ್ಷೆ ಮತ್ತು ವೈಜ್ಞಾನಿಕ ಪರಿಶೋಧನೆ ನಡೆಸುವ ಜವಾಬ್ದಾರಿ ವಹಿಸಲಾಗಿದೆ ಎಂದು ಹೇಳಿದರು. ಎಲ್ಲಿ ಮತ್ತು ಎಷ್ಟರ ಮಟ್ಟಿಗೆ ತಾಮ್ರ ಹಾಗೂ ಚಿನ್ನದ ನಿಕ್ಷೇಪಗಳಿವೆ ಎಂಬುದನ್ನು ಪತ್ತೆಹಚ್ಚುವುದೇ ಪ್ರಸ್ತುತ ಸಂಸ್ಥೆಯ ಉದ್ದೇಶವಾಗಿದೆ. ಸಮೀಕ್ಷೆ ಪೂರ್ಣಗೊಂಡ ನಂತರ ಅದರ ವರದಿಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ ಎಂದು ತಿಳಿಸಿದರು. ಈ ಹಂತದಲ್ಲಿ ರೈತರ ಜಮೀನುಗಳನ್ನು ಖರೀದಿಸುವ ಯಾವುದೇ ಪ್ರಕ್ರಿಯೆ ಇಲ್ಲ. ಸಿಂಗರೇಣಿ ಸಂಸ್ಥೆಯ ಜವಾಬ್ದಾರಿ ನಿಕ್ಷೇಪಗಳ ಕುರಿತು ವೈಜ್ಞಾನಿಕ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದಷ್ಟೇ ಆಗಿದೆ ಎಂದು ಅವರು ಸ್ಪಷ್ಟಪಡಿಸಿದರು. ಸ್ಥಳೀಯರಲ್ಲಿ ಕುತೂಹಲ, ನಿರೀಕ್ಷೆ ಲಿಂಗದಹಳ್ಳಿ ಗ್ರಾಮದ ಶ್ರೀ ಪರಮಾನಂದ ದೇವಸ್ಥಾನದ ಗುಡ್ಡ ಪ್ರದೇಶದಲ್ಲಿ ಚಿನ್ನ ಮತ್ತು ತಾಮ್ರದ ನಿಕ್ಷೇಪಗಳ ಪರಿಶೋಧನೆ ಆರಂಭವಾಗಿರುವುದು ಜಾಲಹಳ್ಳಿ, ಲಿಂಗದಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಜನರಲ್ಲಿ ಕುತೂಹಲ ಹಾಗೂ ನಿರೀಕ್ಷೆ ಮೂಡಿಸಿದೆ. ಭವಿಷ್ಯದಲ್ಲಿ ಗಣಿಗಾರಿಕೆಗೆ ಯೋಗ್ಯ ಪ್ರಮಾಣದ ನಿಕ್ಷೇಪಗಳು ಪತ್ತೆಯಾದರೆ ಸ್ಥಳೀಯರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುವುದರ ಜೊತೆಗೆ ರಸ್ತೆ, ವಿದ್ಯುತ್, ಸಾರಿಗೆ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿಗೂ ಅವಕಾಶ ದೊರೆಯಬಹುದು ಎಂಬ ನಿರೀಕ್ಷೆ ಸ್ಥಳೀಯರಲ್ಲಿದೆ.**

ರೈತರ ಜಮೀನುಗಳಲ್ಲಿ ಮಾದರಿ ಸಂಗ್ರಹ ಪರಿಶೋಧನಾ ಕಾರ್ಯದ ಭಾಗವಾಗಿ ಅಗತ್ಯವಿರುವ ಸ್ಥಳಗಳಲ್ಲಿ ರೈತರ ಜಮೀನುಗಳಲ್ಲಿ ಕೊಳವೆ ಕೊರೆದು ಭೂಗರ್ಭದ ವಿವಿಧ ಪದರಗಳಿಂದ ಮಣ್ಣು ಹಾಗೂ ಅದಿರಿನ ಮಾದರಿಗಳನ್ನು ಸಂಗ್ರಹಿಸಲಾಗುತ್ತದೆ. ನಂತರ ಅವುಗಳನ್ನು ಪ್ರಯೋಗಾಲಯಗಳಲ್ಲಿ ವೈಜ್ಞಾನಿಕವಾಗಿ ಪರೀಕ್ಷಿಸಿ ಚಿನ್ನ ಮತ್ತು ತಾಮ್ರದ ಅಂಶಗಳ ಪ್ರಮಾಣ ಹಾಗೂ ಗುಣಮಟ್ಟವನ್ನು ನಿರ್ಧರಿಸಲಾಗುತ್ತದೆ. ಸಮೀಕ್ಷಾ ಕಾರ್ಯಕ್ಕೆ ಅಗತ್ಯವಿರುವ ಸ್ಥಳೀಯ ಕೂಲಿ ಕಾರ್ಮಿಕರನ್ನು ಸಂಸ್ಥೆಯ ವತಿಯಿಂದ ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಸಾಧ್ಯತೆಯಿದ್ದು, ಇದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶಗಳು ದೊರೆಯುವ ನಿರೀಕ್ಷೆಯಿದೆ.

17 ಕಿ.ಮೀ. ಹಾಗೂ 15 ಕಿ.ಮೀ. ವ್ಯಾಪ್ತಿಯಲ್ಲಿ ಪರಿಶೋಧನೆ ಸಿಂಗರೇಣಿ ಕಾಲರೀಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬುದ್ಧ ಜ್ಯೋತಿ ಪ್ರಕಾಶ್ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ದೊರೆತ ಅನುಮತಿಯ ಹಿನ್ನೆಲೆಯಲ್ಲಿ ಪ್ರದೇಶದಲ್ಲಿ ಪ್ರಾಥಮಿಕ ಹಂತದ ಸಮೀಕ್ಷೆ ಆರಂಭಿಸಲಾಗಿದೆ ಎಂದು ತಿಳಿಸಿದರು. ಶ್ರೀ ಪರಮಾನಂದ ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಕ ಪ್ರದೇಶದಲ್ಲಿ ಪರಿಶೋಧನೆ ನಡೆಸಲಾಗುತ್ತದೆ. ಉತ್ತರ ಭಾಗದಲ್ಲಿ ಕೃಷ್ಣ ನದಿ ಪ್ರದೇಶವಿದ್ದು, ಪೂರ್ವ ದಿಕ್ಕಿನಲ್ಲಿ ಸುಮಾರು 17 ಕಿ.ಮೀ. ಹಾಗೂ ದಕ್ಷಿಣ ದಿಕ್ಕಿನಲ್ಲಿ ಸುಮಾರು 15 ಕಿ.ಮೀ. ವ್ಯಾಪ್ತಿಯಲ್ಲಿ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗುತ್ತದೆ ಎಂದು ಸಂಸ್ಥೆಯ ಸಿಬ್ಬಂದಿ ಮಾಹಿತಿ ನೀಡಿದರು.

ಭೂಗರ್ಭದ ರಚನೆ, ಖನಿಜಗಳ ಲಭ್ಯತೆ, ಅದಿರಿನ ಗುಣಮಟ್ಟ ಹಾಗೂ ಪ್ರಮಾಣ ಸೇರಿದಂತೆ ವಿವಿಧ ವೈಜ್ಞಾನಿಕ ಅಂಶಗಳನ್ನು ಪರಿಶೀಲಿಸಲಾಗುತ್ತದೆ. ಅಂತಿಮ ವರದಿಯ ಆಧಾರದ ಮೇಲೆ ಮುಂದಿನ ಕ್ರಮಗಳ ಕುರಿತು ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದು ಅವರು ಹೇಳಿದರು.

ಅಧಿಕಾರಿಗಳು, ಮುಖಂಡರು ಭಾಗಿ ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿ ಹಂಪಣ್ಣ ಸಜ್ಜನ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿ ಮುತ್ತಪ್ಪ, ಉಪ ತಹಶೀಲ್ದಾರ್ ಗೋವಿಂದ ನಾಯಕ, ಕಂದಾಯ ನಿರೀಕ್ಷಕ ದೇವರೆಡ್ಡಿ, ಕಾಂಗ್ರೆಸ್ ಮುಖಂಡರಾದ ರವಿ ಬೋಸರಾಜ್, ರಾಮಣ್ಣ ಇರಿಬಗೇರಾ, ಲಕ್ಷ್ಮಣ ಜ್ಯೋತಿ, ಶರಣಗೌಡ, ಬಸವರಾಜ ಎಚ್.ಪಿ., ಭೀಮಣ್ಣ ನಾಡಗೌಡ ಚಿಂಚೋಡಿ, ಭೀಮನಗೌಡ, ನಂದಪ್ಪ ಮಡ್ಡಿ, ತಮ್ಮಣ್ಣ ಹೆರುಂಡಿ, ಕುರಿಸಿದ ಪಟೇಲ್ ತಿಮ್ಮಣ್ಣ ನಾಯಕ್, ದುರಗಪ್ಪ ರಾಂಪಳ್ಳಿ ಸೇರಿದಂತೆ ಪತ್ರಕರ್ತರು, ಸಿಂಗರೇಣಿ ಸಂಸ್ಥೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಜಾಲಹಳ್ಳಿಯ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಬಸವರಾಜ ಪಂಪಾಪತಿ ನಿರ್ವಹಿಸಿದರು. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಚಿನ್ನ?ತಾಮ್ರದ ನಿಕ್ಷೇಪಗಳಿರುವ ಸಾಧ್ಯತೆ ಕುರಿತು ನಡೆಯುತ್ತಿರುವ ಮೂರು ವರ್ಷಗಳ ವೈಜ್ಞಾನಿಕ ಪರಿಶೋಧನೆಯ ಅಂತಿಮ ವರದಿಯು ಈ ಭಾಗದಲ್ಲಿ ಭವಿಷ್ಯದಲ್ಲಿ ಗಣಿಗಾರಿಕೆ ನಡೆಸುವ ಸಾಧ್ಯತೆ ಹಾಗೂ ಅದರ ಮುಂದಿನ ಕ್ರಮಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಆಧಾರವಾಗಲಿದೆ.

## ನೇಮಕಾತಿ ಪ್ರಕಟಣೆ

**ICSIL ನೇಮಕಾತಿ 2026–1 ಕಾನೂನು ಅಧಿಕಾರಿ (Law Officer) ಹುದ್ದೆಗೆ ನೇರ ಸಂದರ್ಶನ (Walk-in Interview) 28 ಆಗಸ್ಟ್ 2026**

ICSIL ನೇಮಕಾತಿ 2026: 1 ಕಾನೂನು ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿ. 'ಇಂಟೆಲಿಜೆಂಟ್ ಕಮ್ಯುನಿಕೇಷನ್ ಸಿಸ್ಟಮ್ಸ್ ಇಂಡಿಯಾ ಲಿಮಿಟೆಡ್' (ICSIL) ತನ್ನ ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಕಾನೂನು ಅಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದೆಹಲಿ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 01–ಸೆಪ್ಟೆಂಬರ್–2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: icsil.in

## ನೂತನ ಕರ್ನಾಟಕ ವಕೀಲರ ಪರಿಷತ್ ಸದಸ್ಯ ಮಹಾದೇವ ಪ್ರಸಾದ್‌ಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ನೂತನವಾಗಿ ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾದ ಕೆ.ಎಸ್. ಮಹಾದೇವ ಪ್ರಸಾದ್ ಅವರನ್ನು ಕುಷ್ಟಗಿ ತಾಲೂಕು ವಕೀಲರ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.**




ಈ ಸಂದರ್ಭದಲ್ಲಿ ಮಾತನಾಡಿದ ವಕೀಲರು, ಕರ್ನಾಟಕ ವಕೀಲರ ಪರಿಷತ್ತಿಗೆ ಆಯ್ಕೆಯಾಗಿರುವ ಮಹಾದೇವ ಪ್ರಸಾದ್ ಅವರಿಗೆ ಅಭಿನಂದನೆ ಸಲ್ಲಿಸಿ, ಕಾನೂನು ಕ್ಷೇತ್ರದಲ್ಲಿ ಮತ್ತಷ್ಟು ಉತ್ತಮ ಸೇವೆ ಸಲ್ಲಿಸುವ ಮೂಲಕ ವಕೀಲರ ಹಿತಾಸಕ್ತಿಗೆ ಶ್ರಮಿಸಲಿ ಎಂದು ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಎಚ್.ಆರ್. ನಾಯಕ, ಬಸವರಾಜ ಬಂಡೇರ, ಎಸ್.ಜಿ. ಪಾಟೀಲ, ಎನ್.ಆರ್. ಸೂಡಿ, ಸಿ.ಎನ್. ಉಪ್ಪಿನ, ಎಸ್.ವೈ. ಬುಕುನಟ್ಟಿ, ಎಸ್.ಎನ್. ಪಾಟೀಲ, ಎ.ಎಚ್. ಪಲ್ಲೇದ, ಎಂ.ಎಚ್. ಗೋಡಿ, ತಿಪ್ಪಣ್ಣ ಕುಂಬಾರ, ಬಿ.ಕೆ. ದಾಸರ, ಶಶಿ ಶೆಟ್ಟರ್, ಶಫಿ ಹೇರೂರ ಸೇರಿದಂತೆ ವಕೀಲರು ಉಪಸ್ಥಿತರಿದ್ದರು.

## ಪರನಾರಿ ಸಹೋದರ ಗಂಡುಗಲಿ ಕುಮಾರರಾಮನ ಜಯಂತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ಇಂದು ಪಟ್ಟಣದ ಉಪ್ಪಲ ದೊಡ್ಡಿ ಪೇಟೆಯ ಗೆಳೆಯರ ಬಳಗದ ವತಿಯಿಂದ ಪರನಾರಿ ಸಹೋದರ, ಕುಮಟಾ ದುರ್ಗದ ರಾಜವೀರ, ಕಂಪಿಲಾರಾಯನ ವರಪುತ್ರ, ಮುಮ್ಮಡಿ ಸಿಂಗನಾಯಕನ ಮೊಮ್ಮಗ, ಹ–ರಿಹರ ಬುಕ್ಕರಾಯರ ಸೋದರ ಮಾವ ಪರಾಕ್ರಮಿ ಹಾಗೂ ಪರಾನಾರಿ ಸೋದರ ಶ್ರೀ ಗಂಡುಗಲಿ ಕುಮಾರರಾಮ 706ನೇ ವರ್ಷದ ಜಯಂತಿ ಕಾರ್ಯಕ್ರಮವನ್ನು ಸಂಭ್ರಮ ಸಡಗರದೊಂದಿಗೆ ಆಚರಣೆ ಮಾಡಲಾಯಿತು.**



ಗಂಡುಗಲಿ ಕುಮಾರರಾಮ ಸ್ತ್ರೀಯರಿಗೆ ಸಹೋದರನಾಗಿ ಅವರ ಪಾಲಿನ ದೇವರಾಗಿ ಸಹಾಯ ಸಹಕಾರ ಪರೋಪಕಾರಿ ಜೀವನ ನಡೆಸಿದ್ದಾರೆ, ಅಂದಿನ ಕಾಲಘಟ್ಟದಲ್ಲಿ ಮಹಿಳೆಯ–ರಿಗೆ ಅನೇಕ ಜ್ವಲಾಂತ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರದಾರಿ ಎಂದರೆ ಗಂಡುಗಲಿ ಕುಮಾರರಾಮ ಹೀಗಾಗಿ ಅವರನ್ನು ಪರನಾರಿ ಸಹೋದರ ಎಂದು ಪ್ರಸಿದ್ಧಿ ಪಡೆದಿದ್ದರು. ಈ ಒಂದು ಸಂದರ್ಭದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ತಾಲೂಕ ಅಧ್ಯಕ್ಷರಾದ ಆರ್ ಕೆ ನಾಯಕ, ರಾಕೇಶ್ ಪಾಟೀಲ್, ಮಲ್ಲೇಶಗೌಡ, ರಾಮನಗೌಡ, ಸಿದ್ದು ನಾಯಕ ಮೇಟಿ , ದೇವಣ್ಣ ನಾಯಕ, ವೆಂಕಟೇಶ್ ನಾಯಕ್ ಟೇಲರ್, ಹನುಮಂತ ನಾಯಕ ಹಾಗೂ ಗೆಳೆಯರ ಬಳಗದ ಎಲ್ಲ ಸದಸ್ಯರು ಇದ್ದರು.

# ಸರ್ವಧರ್ಮ–ಸರ್ವಜಾತಿಗೆ ನ್ಯಾಯವೇ ನಮ್ಮ ಸಂಕಲ್ಪ ನಿಸರ್ಗ ಸಂರಕ್ಷಣೆ, ಸಂವಿಧಾನದ ರಕ್ಷಣೆಗಾಗಿ ಜಾಗೃತಿ ಹೋರಾಟ

❑ ನೈಜ್ಯ ದೆಸೆ ನ್ಯೂಸ್

**ಬಿಜಾಪುರ ವಿಶೇಷ ವರದಿ : ಸಮಾಜದಲ್ಲಿ ಸರ್ವಧರ್ಮದ ಹಾಗೂ ಸರ್ವಜಾತಿಯ ಜನರಿಗೆ ಯಾವುದೇ ರೀತಿಯ ಅನ್ಯಾಯವಾಗಬಾರದು. ನಿಸರ್ಗವನ್ನು ಹಾಳು ಮಾಡುವ ಯಾವುದೇ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಭಾರತದ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ನಡೆಯುವವರ ವಿರುದ್ಧ ಹಾಗೂ ಸಮಾಜದಲ್ಲಿ ಅನ್ಯಾಯ ಎಸಗುವವರ ವಿರುದ್ಧ ಎಲ್ಲರ ನೇತೃತ್ವದಲ್ಲಿ ಶಾಂತಿಯುತ ಜಾಗೃತಿ ಹೋರಾಟವನ್ನು ನಡೆಸಲಾಗುವುದು ಎಂದು ಪೂಜ್ಯ ಹವಾ ಮಲ್ಲಿನಾಥ ಮಹಾರಾಜರು ಹೇಳಿದರು.**

ಪೂಜ್ಯ ಹವಾ ಮಲ್ಲಿನಾಥ ಮಹಾರಾಜರ 59ನೇ ಜನ್ಮದಿನದ ಅಂಗವಾಗಿ ಬಿಜಾಪುರ ಜಿಲ್ಲೆಯ ತಿಡಗುಂಡಿ ಆಶ್ರಮದಲ್ಲಿ ಆಯೋಜಿಸಲಾಗಿದ್ದ ವಿಶೇಷ ಸಮಾರಂಭದಲ್ಲಿ ಜನರನ್ನು ಉದ್ದೇಶಿಸಿ ಅವರು ತಮ್ಮ ಹುಟ್ಟುಹಬ್ಬದ ಶುಭ ಸಂದೇಶವನ್ನು ನೀಡಿದರು. ಜನ್ಮದಿನವೆಂದರೆ ಸಮಾಜದ ಒಳಿತಿಗಾಗಿ ಸಂಕಲ್ಪ ಜನ್ಮದಿನದ ಆಚರಣೆ ಕೇವಲ ವೈಯಕ್ತಿಕ ಸಂತೋಷಕ್ಕೆ ಸೀಮಿತವಾಗಬಾರದು. ಸಮಾಜದ ಒಳಿತಿಗಾಗಿ ಹೊಸ ಸಂಕಲ್ಪ ಮಾಡುವ ದಿನವಾಗಬೇಕು. ಸಮಾಜದಲ್ಲಿ ಅನ್ಯಾಯಕ್ಕೊಳಗಾಗುತ್ತಿರುವ ಪ್ರತಿಯೊಬ್ಬರ ಪರವಾಗಿ ಧ್ವನಿ ಎತ್ತುವುದು ಹಾಗೂ ಮಾನವೀಯ ಮೌಲ್ಯಗಳನ್ನು ಉಳಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಮಹಾರಾಜರು ತಿಳಿಸಿದರು.

ಧರ್ಮ, ಜಾತಿ, ಭಾಷೆ ಮತ್ತು ವರ್ಗಗಳ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಪ್ರಯತ್ನಗಳನ್ನು ತಡೆದು, ಪ್ರತಿಯೊಬ್ಬರೂ ಸಹೋದರತ್ವ ಮತ್ತು ಸಮಾನತೆಯ ಮನೋಭಾವದಿಂದ ಬದುಕಬೇಕು ಎಂದು ಅವರು ಕರೆ ನೀಡಿದರು. ಸರ್ವಧರ್ಮ ಸಮಭಾವವೇ ಭಾರತದ ಶಕ್ತಿ ಭಾರತವು ವಿವಿಧ ಧರ್ಮ, ಜಾತಿ, ಭಾಷೆ ಮತ್ತು ಸಂಸ್ಕೃತಿಗಳ ಸಂಗಮವಾಗಿದೆ. ಈ ವೈವಿಧ್ಯತೆಯೇ ದೇಶದ ಶಕ್ತಿಯಾಗಿದೆ. ಆದ್ದರಿಂದ ಯಾವುದೇ ಧರ್ಮದ ಅಥವಾ ಯಾವುದೇ ಜಾತಿಯ ವ್ಯಕ್ತಿಗೆ ಅನ್ಯಾಯವಾಗದಂತೆ



ನೋಡಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಎಂದು ಪೂಜ್ಯರು ಹೇಳಿದರು. ಸರ್ವರನ್ನೂ ಸಮಾನ ದೃಷ್ಟಿಯಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಬೇಕು. ಒಬ್ಬ ವ್ಯಕ್ತಿಗೆ ಆಗುವ ಅನ್ಯಾಯ ಇಡೀ ಸಮಾಜದ ಮೇಲಿನ ಅನ್ಯಾಯ ಎಂಬ ಭಾವನೆಯೊಂದಿಗೆ ಪ್ರತಿಯೊಬ್ಬರೂ ನ್ಯಾಯದ ಪರವಾಗಿ ನಿಲ್ಲಬೇಕು ಎಂದು ಅವರು ತಿಳಿಸಿದರು.

ನಿಸರ್ಗ ಉಳಿದರೆ ಮಾತ್ರ ಜೀವನ ಉಳಿಯುತ್ತದೆ ಅಭಿವೃದ್ಧಿಯ ಹೆಸರಿನಲ್ಲಿ ನಿಸರ್ಗವನ್ನು ನಾಶ ಮಾಡುವ ಕಾರ್ಯಗಳು ಮಾನವ ಕುಲದ ಭವಿಷ್ಯಕ್ಕೆ ಅಪಾಯವನ್ನುಂಟು ಮಾಡುತ್ತಿವೆ. ಅರಣ್ಯ, ಜಲ, ಭೂಮಿ ಹಾಗೂ ಪರಿಸರವನ್ನು ರಕ್ಷಿಸುವುದು ಇಂದಿನ ಅತ್ಯಂತ ದೊಡ್ಡ ಜವಾಬ್ದಾ–ರಿಯಾಗಿದೆ ಎಂದು ಮಹಾರಾಜರು ಹೇಳಿದರು. "ನಿಸರ್ಗ ಉಳಿದರೆ ಮಾತ್ರ ಮಾನವ ಜೀವನ ಉಳಿಯುತ್ತದೆ. ನಿಸರ್ಗವನ್ನು ಹಾಳು ಮಾಡುವ ಹಕ್ಕು ಯಾರಿಗೂ ಇಲ್ಲ. ಮುಂದಿನ ಪೀಳಿಗೆಗೆ ಉತ್ತಮ ಪರಿಸರವನ್ನು ನೀಡುವುದು ನಮ್ಮ ಕರ್ತವ್ಯ" ಎಂಬ ಸಂದೇಶವನ್ನು ಅವರು ನೀಡಿದರು. ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಿಕೊಂಡು, ಪ್ರಕೃತಿಯೊಂದಿಗೆ ಹೊಂದಾಣಿಕೆಯಿಂದ ಜೀವನ ನಡೆಸಬೇಕು ಎಂದು ಅವರು ಕರೆ ನೀಡಿದರು.

ಸಂವಿಧಾನ ನಮ್ಮೆಲ್ಲರ ರಕ್ಷಣಾ ಕವಚ ಭಾರತದ ಸಂವಿಧಾನವು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ನೀಡಿದೆ. ಸಂವಿಧಾನದ ಆಶಯಗಳನ್ನು ಗೌರವಿಸಿ ಅದರ ಮೌಲ್ಯಗಳನ್ನು ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ ಎಂದು ಮಹಾರಾಜರು ತಿಳಿಸಿದರು. ಸಂವಿಧಾನದ ವಿರುದ್ಧವಾಗಿ ನಡೆದುಕೊಳ್ಳುವವ–ರಿಂದ ಸಮಾಜಕ್ಕೆ ಉಂಟಾಗುವ ಅಪಾಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ. ಕಾನೂನು ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ಚೌಕಟ್ಟಿನೊಳಗೆ ನ್ಯಾಯಕ್ಕಾಗಿ ಹೋರಾಟ ನಡೆಸಬೇಕು ಎಂದು ಅವರು ಹೇಳಿದರು. ಅನ್ಯಾಯದ ವಿರುದ್ಧ ಜಾಗೃತಿ ಹೋರಾಟ ಸಮಾಜದಲ್ಲಿ ನಡೆಯುವ ಅನ್ಯಾಯ, ಅಸಮಾನತೆ ಹಾಗೂ ಮಾನವೀಯ ಮೌಲ್ಯಗಳಿಗೆ ಧಕ್ಕೆ ತರುವ ಚಟುವಟಿಕೆಗಳ ವಿರುದ್ಧ ಮೌನವಾಗಿರುವುದಕ್ಕಿಂತ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಅಗತ್ಯವಾಗಿದೆ ಎಂದು ಮಹಾರಾಜರು ಅಭಿಪ್ರಾಯಪಟ್ಟರು.

ಸರ್ವಧರ್ಮ, ಸರ್ವಜಾತಿ ಹಾಗೂ ಸಮಾಜದ ಎಲ್ಲ ವರ್ಗಗಳ ಜನರನ್ನು ಒಗ್ಗೂಡಿಸಿಕೊಂಡು ಮುಂದಿನ ದಿನಗಳಲ್ಲಿ ಜಾಗೃತಿ ಹೋರಾಟ ನಡೆಸಲಾಗುವುದು ಎಂದು ಅವರು ಘೋಷಿಸಿದರು. ಈ ಹೋರಾಟವು ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ಸಮಾನತೆ ಮತ್ತು ನ್ಯಾಯವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಎಲ್ಲರೂ ಕೈಜೋಡಿಸಿ ದೇಶದ ಏಕತೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬಲಪಡಿಸಬೇಕು ಎಂದು ಮಹಾರಾಜರು ಕರೆ ನೀಡಿದರು. ತಿಡಗುಂಡಿ ಆಶ್ರಮದಲ್ಲಿ ಹೊಸ ಸಂಕಲ್ಪದ ಪ್ರತಿಧ್ವನಿ ಪೂಜ್ಯ ಹವಾ ಮಲ್ಲಿನಾಥ ಮಹಾರಾಜರ 59ನೇ ಜನ್ಮದಿನದ ಆಚರಣೆ ತಿಡಗುಂಡಿ ಆಶ್ರಮದಲ್ಲಿ ಕೇವಲ ಹುಟ್ಟುಹಬ್ಬದ ಸಂಭ್ರಮಕ್ಕೆ ಸೀಮಿತವಾಗದೆ, ಸಮಾಜಮುಖಿ ಚಿಂತನೆ ಮತ್ತು ಹೊಸ ಸಂಕಲ್ಪಕ್ಕೆ ಸಾಕ್ಷಿಯಾಯಿತು.

ಸರ್ವಧರ್ಮಕ್ಕೆ ಗೌರವ, ಸರ್ವಜಾತಿಗೆ ನ್ಯಾಯ, ನಿಸರ್ಗಕ್ಕೆ ರಕ್ಷಣೆ ಹಾಗೂ ಸಂವಿಧಾನದ ಮೌಲ್ಯಗಳಿಗೆ ಗೌರವ ಎಂಬ ನಾಲ್ಕು ಪ್ರಮುಖ ಆಶಯಗಳೊಂದಿಗೆ ಮಹಾರಾಜರು ನೀಡಿದ ಸಂದೇಶವು ಭಕ್ತರು ಮತ್ತು ಸಾರ್ವಜನಿಕರಲ್ಲಿ ಹೊಸ ಚಿಂತನೆ ಮೂಡಿಸಿತು. "ನ್ಯಾಯಕ್ಕಾಗಿ ಒಂದಾಗೋಣ? ನಿಸರ್ಗವನ್ನು ಉಳಿಸೋಣ? ಸಂವಿಧಾನದ ಮೌಲ್ಯಗಳನ್ನು ಕಾಪಾಡೋಣ?" ಎಂಬ ಸಂದೇಶದೊಂದಿಗೆ ಪೂಜ್ಯ ಹವಾ ಮಲ್ಲಿನಾಥ ಮಹಾರಾಜರ 59ನೇ ಜನ್ಮದಿನದ ವಿಶೇಷ ಸಂದೇಶ ಸಮಾಜದಲ್ಲಿ ಜಾಗೃತಿ ಮೂಡಿಸುವ ಹೊಸ ಸಂಕಲ್ಪಕ್ಕೆ ನಾಂದಿಯಾಯಿತು.

ವಿಶೇಷ ಸಮಾರಂಭದಲ್ಲಿ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. ಕರ್ನಾಟಕ. ಮಹಾರಾಷ್ಟ್ರ. ತೆಲಂಗಾಣ ಹೀಗೆ ಅನೇಕ ರಾಜ್ಯದಿಂದ ಭಕ್ತರು ಪರಮ ಪೂಜ್ಯ ಶ್ರೀ ಹವಾ ಮಲ್ಲಿನಾಥ ಮಹಾರಾಜರ ದರ್ಶನ ಪಡೆದು ಗುರು ಕೃಪೆಗೆ ಪಾತ್ರರಾದರು. ಸಮಾರಂಭವು ಪ್ರಾರ್ಥನೆ ಗೀತೆಯೊಂದಿಗೆ ಆರಂಭವಾಗಿದು. ಭಾರತದ ಸಂವಿಧಾನದ ಪೀಠಿಕೆಯನ್ನು ಭೋದಿಸಲಾಯಿತು. ಹಾಗೂ ಸ್ವತಂತ್ರ ಭಾರತದ ಘೋಷಣೆ ಮೊಳಗಿದವು. ವೇದಿಕೆಯ ಮೇಲೆ ಸೇವಾ ಲಾಲ ಮಹಾರಾಜ. ನಿವೃತ ಪೊಲೀಸ್ ಅಧಿಕಾರಿ ಗುರುಸಿದ್ದಪ್ಪ ಬೆನಕನಹಳ್ಳಿ. ಪತ್ರಕರ್ತ ಮಲ್ಲಿಕಾರ್ಜುನ ಮರಕಲೆ. ಧರ್ಮೇಂದ್ರ ಪೂಜಾರಿ. ಮಾಣಿಕ ಮರಕಲೆ. ವಿಲಾಸ ಪಾಟೀಲ. ಮಹಾದೇವ ಜಾಧವ. ವೀರಶೆಟ್ಟಿ ಸ್ವಾಮಿ ಉಪಸ್ಥಿತರಿದ್ದರು. ವೈಜಿನಾಥ ಝುಳಕಿ ಅಚ್ಚು ಕಟ್ಟಾಗಿ ನಿರೂಪಣೆ ಮಾಡಿದರು.

# ಜಾಲಹಳ್ಳಿ ಗ್ರಾಪಂನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ: ಶೀಘ್ರ ಪರಿಹಾರಕ್ಕೆ KPRS ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ಜಾಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಲವು ಮೂಲಭೂತ ಸೌಕರ್ಯಗಳ ಕೊರತೆಯಿಂದ ಸಾರ್ವಜನಿಕರು ದಿನನಿತ್ಯ ಸಮಸ್ಯೆ ಎದುರಿಸುತ್ತಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ (KPRS) ಜಾಲಹಳ್ಳಿ ಗ್ರಾಮ ಸಮಿತಿ ಆಗ್ರಹಿಸಿದೆ.**

ಈ ಕುರಿತು ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಕಆಔ) ಅವರಿಗೆ ಸಂಘದ ವತಿಯಿಂದ ಮನವಿ ಪತ್ರ ಸಲ್ಲಿಸಿ, ಗ್ರಾಮದಲ್ಲಿನ ರಸ್ತೆ, ಚರಂಡಿ, ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ವಿವಿಧ ಮೂಲಭೂತ ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸುವಂತೆ ಒತ ್ತಾಯಿಸಲಾಯಿತು. ಪ್ರಮುಖ ಬೇಡಿಕೆಗಳು ಜಾಲಹಳ್ಳಿ ಗ್ರಾಮದಲ್ಲಿನ ವಿವಿಧ ವಾರ್ಡ್‌ಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಏಕಖಖ ಕೆಳಗಿನ ಬೇಡಿಕೆಗಳನ್ನು ಮುಂದಿಟ್ಟಿದೆ.

ಗಂಗಾ ನಗರ ಮಾರ್ಗ ಸ್ವಚ್ಛತೆ: ವಾರ್ಡ್ ನಂ.4ರ ಗಂಗಾ ನಗರ ವ್ಯಾಪ್ತಿಯ ಗಾಜಲದಿನ್ನಿ ಮಾರ್ಗವನ್ನು ಸ್ವಚ್ಛಗೊಳಿಸಬೇಕು.



* ಚರಂಡಿ ಸ್ವಚ್ಛತೆ: ಜಾಲಹಳ್ಳಿಯ ಎಲ್ಲ ವಾರ್ಡ್‌ಗಳ ಚರಂಡಿಗಳಲ್ಲಿನ ಹೂಳು ತೆಗೆದು ನೈರ್ಮಲ್ಯ ಕಾಪಾಡಬೇಕು.
* ರಸ್ತೆ ಸ್ವಚ್ಛತೆ: ವಾರ್ಡ್ ನಂ.5ರ ಬುಳ್ಳಯ್ಯನ ಕಟ್ಟೆ ಹಿಂಭಾಗದ ರಸ್ತೆಯನ್ನು ಸ್ವಚ್ಛಗೊಳಿಸಬೇಕು.
* ಸಾರ್ವಜನಿಕ ಶೌಚಾಲಯಗಳ ಸ್ವಚ್ಛತೆ: ವಾರ್ಡ್ ನಂ.6 ಮತ್ತು 8ರ ಸಾರ್ವಜನಿಕ ಶೌಚಾಲಯಗಳ ಸುತ್ತ ಬೆಳೆದಿರುವ ಜಾಲಗಂಟಿ ಗಿಡಗಳನ್ನು ತೆರವುಗೊಳಿಸಬೇಕು.

RO Plant ದುರಸ್ತಿ: ವಾರ್ಡ್ ನಂ.4, 5, 6 ಮತ್ತು 8ರಲ್ಲಿ ಸ್ಥಗಿತಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ತಕ್ಷಣ ದುರಸ್ತಿಗೊಳಿಸಿ ಪುನಃ ಕಾರ್ಯಾರಂಭ ಮಾಡಬೇಕು.

ದನಕರುಗಳ ಹಾವಳಿ ನಿಯಂತ್ರಣ: ರಸ್ತೆಯಲ್ಲಿ ಅಡ್ಡಾಡುವ ದನಕರುಗಳಿಂದ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಅಪಘಾತದ ಭೀತಿ ಎದುರಾಗಿರುವುದರಿಂದ, ಮಾಲೀಕ–ರಿಗೆ ಸೂಕ್ತ ಸೂಚನೆ ನೀಡಿ ದನಕರುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಬೇಕು.

* ಸಾರ್ವಜನಿಕ ಸ್ಥಳಗಳ ಹದ್ದುಬಸ್ತ್: ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಔಠಿಜಟಿ ಖಣಜಗಳ ಒತ್ತುವರಿ ತಡೆಯಲು ಸ್ಥಳ ಪರಿಶೀಲನೆ ನಡೆಸಿ, ಸರ್ವೇ ಮಾಡಿಸಿ ಹದ್ದುಬಸ್ತ್ ನಿಗದಿಪಡಿಸಿ ನಾಮಫಲಕ ಅಳವಡಿಸಬೇಕು.

*ಶೌಚಾಲಯ ಅನುದಾನ ಬಿಡುಗಡೆ: ವೈಕ್ತಿಗತ ಶೌಚಾಲಯ ನಿರ್ಮಿಸಿಕೊಂಡಿರುವ ಫಲಾನುಭವಿಗಳಿಗೆ ಬಾಕಿ ಇರುವ ಅನುದಾನವನ್ನು ಶೀಘ್ರವಾಗಿ ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು.

* ಅಂಗನವಾಡಿಗೆ ಕಾಂಪೌಂಡ್: ವಾರ್ಡ್ ನಂ.6ರ ಅಂಗನವಾಡಿ ಕೇಂದ್ರದ ಸುತ್ತಲೂ ಕಾಂಪೌಂಡ್ ನಿರ್ಮಿಸಬೇಕು.
* ಇ–ಸ್ವತ್ತು ವಿಳಂಬಕ್ಕೆ ಕ್ರಮ: ಇ–ಸ್ವತ್ತು ಮಾಡಿಕೊಡುವಲ್ಲಿ ವಿಳಂಬವಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಕೌಂಟೆಂಟ್ ಅಯ್ಯಪ್ಪ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.
* ಸಂತೆ ಮೈದಾನ ಹದ್ದುಬಸ್ತ್: ಜಾಲಹಳ್ಳಿ ಗ್ರಾಮದ ಸಂತೆ ಮೈದಾನವನ್ನು ಸಮರ್ಪಕವಾಗಿ ಹದ್ದುಬಸ್ತ್ ಮಾಡಬೇಕು.

ಸಾರ್ವಜನಿಕರ ಸಮಸ್ಯೆಗಳಿಗೆ ಅಧಿಕಾ–ರಿಗಳು ತಕ್ಷಣ ಸ್ಪಂದಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಇಲಾಖೆಗಳ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದು ರೈತ ಸಂಘದ ಮುಖಂಡರು ಎಚ್ಚರಿಕೆ ನೀಡಿದರು.

ಗ್ರಾಮ ಸಮಿತಿ ಅಧ್ಯಕ್ಷ ಹನುಮಂತ ಜಾಲಹಳ್ಳಿ ಹಾಗೂ ಕಾರ್ಯದರ್ಶಿ ರಂಗನಾಥ ಬುಂಕಲದೊಡ್ಡಿ ಅವರ ನೇತೃತ್ವದಲ್ಲಿ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಹನುಮಂತ, ರಂಗನಾಥ ಬುಂಕಲದೊಡ್ಡಿ, ದುರುಗಪ್ಪ ಹೊರಾಟ್ಟಿ, ಬಸವರಾಜ ವಂದ್ಲಿ, ಕಲಿಮುದ್ದಾರ್, ಶಿವಪ್ಪ ಸಿ., ರಂಗನಾಥ ತ್ಯಾಪ್ಲಿ ಸೇ–ರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ದೇವದುರ್ಗ ಪಟ್ಟಣದಲ್ಲಿ ಅದ್ದೂರಿಯಾಗಿ ಈದ್ ಮಿಲಾದ್ ಆಚರಣೆ

## ಸಡಗರ–ಸಂಭ್ರಮದಿಂದ ನಡೆದ ಜುಲೂಸ್–ಎ–ಮೊಹಮ್ಮದಿ ; ಶಾಂತಿ, ಸಹೋದರತ್ವದ ಸಂದೇಶ ಸಾರಿದ ಗಣ್ಯರು

❑ ನೈಜ್ಯ ದೆಸೆ ನ್ಯೂಸ್

**ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ಪಟ್ಟಣದಲ್ಲಿ ಪವಿತ್ರ ಈದ್ ಮಿಲಾದ್ ಹಬ್ಬವನ್ನು ಮುಸ್ಲಿಂ ಬಾಂಧವರು ಸಡಗರ, ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಿಸಿದರು. ಈದ್ ಮಿಲಾದ್ ಆಚರಣೆಯ ನೇತೃತ್ವವನ್ನು ಜನಾಬ್ ಎಕ್ಬಾಲ್ ಸಾಬ್ ಹೌದೋಡ್ಡಿ ಹಾಗೂ ಸದರ್ ಖಾಜಿ ಮೊಹಮ್ಮದ್ ಆಸೀಫ್ ಜಿಲಾನಿ ವಹಿಸಿದ್ದರು.**

ಹಬ್ಬದ ಅಂಗವಾಗಿ ಪಟ್ಟಣದ ಹಜರತ್ ಜಹೀರುದ್ದೀನ್ ಪಾಷಾ ವೃತ್ತದ ಆವರಣದಲ್ಲಿ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಜಮಾಯಿಸಿದರು. ಬಳಿಕ ಜುಲೂಸ್–ಎ–ಮೊಹಮ್ಮದಿ ? ಮೆರವಣಿಗೆಗೆ ಚಾಲನೆ ನೀಡಲಾಯಿತು. ಮಕ್ಕಳು ಹಾಗೂ ಯುವಕರು ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದ ಮೆರವಣಿಗೆಯಲ್ಲಿ ಮದೀನಾ ಮಾದರಿಯ ಸ್ತಬ್ಧಚಿತ್ರಗಳು ಗಮನ ಸೆಳೆದವು. ಭಕ್ತಿ ಗೀತೆಗಳು ಹಾಗೂ ಧಾರ್ಮಿಕ ಘೋಷಣೆಗಳೊಂದಿಗೆ ಮೆರವಣಿಗೆಯು ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗಿತು.

ಮೆರವಣಿಗೆಯು ಹಜರತ್ ಜಹೀರುದ್ದೀನ್ ಪಾಷಾ ವೃತ್ತದಿಂದ ಆರಂಭಗೊಂಡು ಅಂಬೇಡ್ಕರ್ ವೃತ್ತ ತಲುಪಿತು.



ಅಲ್ಲಿಂದ ಮಹಾತ್ಮ ಗಾಂಧಿ ವೃತ್ತದ ಮಾರ್ಗವಾಗಿ ಸಾಗಿದ ಜುಲೂಸ್ ಈದ್ಗಾ ಮೈದಾನ ತಲುಪಿತು. ನಂತರ ಕಾರ್ಯಕ್ರಮಗಳು ಮುಕ್ತಾಯಗೊಂಡವು. ಪ್ರವಾದಿಯವರ ಆದರ್ಶ ಪಾಲಿಸಲು ಕರೆ ಈ ಸಂದರ್ಭದಲ್ಲಿ ಮಾತನಾಡಿದ ಜಾಮಿಯಾ ಮಸೀದಿಯ ಪೇಶ್ ಇಮಾಮ್ ಮೌಲಾನಾ ಜಹೀರ್ ಅಬ್ಬಾಸ್ ಅವರು, ಪ್ರವಾದಿ ಹಜರತ್ ಮೊಹಮ್ಮದ್ ಪೈಗಂಬರ್ ? ಅವರ ಜನ್ಮದಿನದ ಸ್ಮರಣಾರ್ಥ ಈದ್ ಮಿಲಾದ್ ಆಚರಿಸಲಾಗುತ್ತಿದೆ. ಪ್ರವಾದಿಯವರು ಜಾತಿ, ಧರ್ಮ ಹಾಗೂ ಭೇದಭಾವವಿಲ್ಲದೆ ಎಲ್ಲರೂ ಸಮಾನರು ಎಂಬ ಸಂದೇಶವನ್ನು ಸಾರಿದ್ದರು. ಹೆಣ್ಣು–ಗಂಡು ಎಂಬ ಭೇದವಿಲ್ಲದೆ ಪ್ರತಿಯೊಬ್ಬರೂ ಶಿಕ್ಷಣ ಪಡೆಯಬೇಕು ಎಂದು ಬೋಧಿಸಿದ್ದರು ಎಂದರು.

ಜಗತ್ತಿನಲ್ಲಿ ಶಾಂತಿ, ಸಹೋದರತ್ವ, ಸಮಾನತೆ ಮತ್ತು ಸಹಬಾಳ್ವೆ ನೆಲೆಸಲು ಪ್ರವಾದಿ ಮುಹಮ್ಮದ್ ? ಅವರ ಆದ–ರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರು ಬೋಧಿಸಿದ ಶಾಂತಿ ಮತ್ತು ಮಾನವೀಯತೆಯ ಸಂದೇಶಗಳು ಜಗತ್ತಿಗೆ ಬೆಳಕಾಗಲಿ ಎಂದು ಆಶಿಸಿದರು. ಪಟ್ಟಣದ ಎಲ್ಲಾ ಮಸೀದಿಯಲ್ಲಿ ಸಿಹಿ ವಿತರಣೆ ಮೆರವಣಿಗೆಯ ಬಳಿಕ ಪಟ್ಟಣದ ಎಲ್ಲಾ ಮಸೀದಿಯಲ್ಲಿ

**ಈದ್ ಮಿಲಾದ್ ಆಚರಣೆಯ ನೇತೃತ್ವ ವಹಿಸಿದ್ದ ಜನಾಬ್ ಎಕ್ಬಾಲ್ ಸಾಬ್ ಹೌದೋಡ್ಡಿ ಮಾತನಾಡಿ, ಪ್ರವಾದಿ ಮುಹಮ್ಮದ್ ? ಅವರು ಬೋಧಿಸಿದ ಶಾಂತಿ, ಸಹಬಾಳ್ವೆ ಮತ್ತು ಸಹೋದರತೆಯ ಮಾನವೀಯ ಸಂದೇಶಗಳು ಲೋಕದ ಹಾದಿಗೆ ಬೆಳಕಾಗಲಿ. ನಾಡಿನ ಸಮಸ್ತ ಮುಸ್ಲಿಂ ಬಾಂಧವರಿಗೆ ಈದ್ ಮಿಲಾದ್ ಹಬ್ಬದ ಹಾರ್ದಿಕ ಶುಭಾಶಯಗಳು ಎಂದು ಹೇಳಿದರು.**

ಸಿಹಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿ–ತ್ತು. ಪಟ್ಟಣದ ಮುಸ್ಲಿಂ ಬಾಂಧವರು ಸೇರಿದಂತೆ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದು, ಹಲವರು ಇದರ ಪ್ರಯೋಜನ ಪಡೆದರು. ಕಾರ್ಯಕ್ರಮದಲ್ಲಿ ಜಾಮಿಯಾ ಮಸೀದಿಯ ಪೇಶ್ ಇಮಾಮ್ ಮೌಲಾನಾ ಜಹೀರ್ ಅಬ್ಬಾಸ್, ಮೌಲಾನಾ ಅಬ್ದುಲ್ ರಹಮಾನ್, ಮೌಲಾನಾ ಜೂಬೆರ್ ಅಶ್ರಫಿ, ಹಫೀಜ್ ರಜಬಲಿ ಸಾಬ್ ಸೇ–ರಿದಂತೆ ಧಾರ್ಮಿಕ ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮುಸ್ಲಿಂ ಮುಖಂಡರಾದ ಜನಾಬ್ ಎಕ್ಬಾಲ್ ಸಾಬ್ ಹೌದೋಡ್ಡಿ, ಸದರ್ ಖಾಜಿ ಮೊಹಮ್ಮದ್ ಆಸೀಫ್ ಜಿಲಾನಿ, ಜನಾಬ್ ಅಮೀನ್ ಭಾಷ, ಈದ್ಗಾ ಕಮಿಟಿ ಅಧ್ಯಕ್ಷರು, ಜನಾಬ್ ರಾಜು ಸಾಹೇಬ್, ಹಜರತ್ ಜಹೀರುದ್ದೀನ್ ಪಾಷಾ ದರ್ಗಾ, ಖಾಜಾ ಮೊಯಿನುದ್ದಿನ್ (ಬಾಬಾ), ಡಾ. ಎಸ್. ಕೆ. ಮೊಯಿನುದ್ದಿನ್, ಕಾಸಿಮ್ ಸಾಬ್ ಅಂಜಳ್, ಹಸೇನ್ ಸಾಬ್ ಅಂಜಳ್, ಶಫೀಕ್ ಖಾಜಿ, ಟಿ. ಜಾಕಿರ್ ಹುಸೇನ್, ಮೋಹಸಿನ್ ಖಾಜಿ, ಗೌಸ್ ಎಲೆಕ್ಟ್ರಿಕಲ್, ಮಾಶಾಕ್ ರಝು, ಮುನೀರ್ ಸಾಬ್, ಅಯೂಬ್ ಖಾನ್, ಜಹೀರುದ್ದಿನ್ ನಾಗುಂಡಿ, ಹಸನ್ ಸಾಬ್ ಪೂಜಾರಿ, ಹಸನ್ ಸಾಬ್ ರಾಮನಾಳ್, ಮೊಯಿನುದ್ದಿನ್ ಗೌರಂಪೇಟ ಸೇರಿದಂತೆ ಹಲವು ಮುಖಂಡರು ಹಾಗೂ ಸಮುದಾಯದ ಸದಸ್ಯರು ಉಪಸ್ಥಿತರಿದ್ದರು.

ಊರಿನ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈದ್ ಮಿಲಾದ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಸೂಕ್ತ ಪೊಲೀಸ್ ಬಂದೋಬಸ್ತ್ ಈದ್ ಮಿಲಾದ್ ಜುಲೂಸ್ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆ ವತಿಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಪಿಐ ಮಂಜುನಾಥ್ ಅವರ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿ ಮೆರವಣಿಗೆಯುದ್ದಕ್ಕೂ ಕರ್ತವ್ಯ ನಿರ್ವಹಿಸಿ, ಶಾಂತಿಯುತವಾಗಿ ಕಾರ್ಯಕ್ರಮ ನಡೆಯಲು ಸಹಕರಿಸಿದರು.

## ವಚನ ದರ್ಶನ

ಸಂಸಾರವೆಂಬುದೊಂದು ಗಾಳಿಯ ಸೊಡರುಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ. ಇದ ನಚ್ಚಿ ಕೆಡಬೇಡ. ಸಿರೆಯೆಂಬುದ ಮರೆದು ಪೂಜಿಸು ನಮ್ಮ ಕೂಡಲಸಂಗಮದೇವನ

ಸಂಸಾರವೆಂಬುದೊಂದು ಗಾಳಿಯ ಸೊಡರು, ಸಿರಿಯೆಂಬುದೊಂದು ಸಂತೆಯ ಮಂದಿ ಕಂಡಯ್ಯಾ" ಇದು ಜಗಜ್ಯೋತಿ ಬಸವಣ್ಣನವರ ಪ್ರಸಿದ್ಧ ವಚನವಾಗಿದೆ.ಸಂಸಾರದ ಅಸ್ಥಿರತೆ ಮತ್ತು ಲೌಕಿಕ ಸಂಪತ್ತಿನ ಸ್ವರೂಪವನ್ನು ಬಸವಣ್ಣನವರು ಈ ವಚನದ ಮೂಲಕ ಅತ್ಯಂತ ಸುಂದರವಾಗಿ ವಿವರಿಸಿದ್ದಾರೆ.

ಭಾರತೀಯ ಅಧ್ಯಾತ್ಮ ಚಿಂತಕರು ಸಂಸಾರವನ್ನು ಕುರಿತು ವಿಸ್ತೃತವಾಗಿ ಚಿಂತನೆ ನಡೆಸಿದ್ದಾರೆ. ವೇದಾಂತಿಗಳು ಸಂಸಾರವನ್ನು ಮಿಥ್ಯೆ ಎನ್ನುವರು. ಅವರ ದೃಷ್ಟಿಯಲ್ಲಿ ಇರುವುದೊಂದೇ ಬ್ರಹ್ಮ. ಹಾಗಾಗಿ ಬ್ರಹ್ಮವೊಂದೆ ಸತ್ಯವೆಂದು ಅವರು ಪ್ರತಿಪಾದಿಸಿದರೆ ಬ್ರಹ್ಮದಷ್ಟೇ ಸಂಸಾರವೂ ಸತ್ಯವೆಂದು ಹೇಳುವ ಪ್ರತಿವಾದಿಗಳೂ ಇದ್ದಾರೆ. ಪರಮಾತ್ಮನಿಂದ ನಿರ್ಮಿತವಾದ ಸಂಸಾರವು ಮಿಥ್ಯೆಯಲ್ಲ. ಅದು ಪರಮಾತ್ಮನಷ್ಟೇ ಸತ್ಯ. ಪರಮಾತ್ಮನು ಸಂಸಾರವನ್ನು ವ್ಯಾಪಿಸಿ ನಿಂತಿದ್ದಾನೆ ಎಂದು ಹೇಳುವ ಚಿಂತಕರೂ ಇದ್ದಾರೆ. ಆದ್ದರಿಂದ ಅನೇಕ ಅನುಭಾವಿಗಳ ದೃಷ್ಟಿಯಲ್ಲಿ ಸಂಸಾರವು ತ್ಯಾಜ್ಯವಲ್ಲ. ಅನೇಕರು ಸಂಸಾರದಿಂದಲೇ ಸದ್ಗತಿ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ತಮ್ಮ ಬದುಕಿನಿಂದ ಅದನ್ನು ಸಾಕಾರಗೊಳಿಸಿದ್ದಾರೆ.

ಬಸವಣ್ಣನವರೂ ಸಂಸಾರದಲ್ಲಿದ್ದೇ ಬದುಕು ಕಂಡುಕೊಂಡವರು. ಹಾಗೆಯೇ ಸದ್ಗತಿಯನ್ನು ಹೊಂದಿದವರು. ವಸ್ತುಸ್ಥಿತಿ ಹೀಗಿದ್ದರೂ ಸಂಸಾರವೆಂಬುದೊಂದು ಗಾಳಿಯ ಸೊಡರು ಎಂದು ಹೇಳಿರುವುದು ಆಶ್ಚರ್ಯವನ್ನುಂಟುಮಾಡದೆ ಇರದು. ಸಂಸಾರವು ಕ್ಷಣಿಕವಾದುದು. ಸಂಸಾರದಲ್ಲಿರುವ ಸಿರಿ ಸಂಪತ್ತುಗಳೂ ಕೂಡ ಕ್ಷಣಿಕವಾದವುಗಳು. ಅವುಗಳ ಕ್ಷಣಿಕತೆಯನ್ನು ಅರಿಯಬೇಕು, ಅವುಗಳಲ್ಲಿ ಆಸಕ್ತಿಯನ್ನು ಹೊಂದಿ ಸಾಧಿಸಬೇಕಾದುದನ್ನು ಮರೆಯಬಾರದು ಎಂಬುದು ಅವರ ಆಶಯ. ಸಂಸಾರದ ಜೊತೆಗೆ ಸಿರಿಯನ್ನೂ ಪ್ರಸ್ತಾಪಿಸುವ ಅವರು ಸಂಸಾರ ಸಿರಿಗಳೆರಡನ್ನೂ ನೆಚ್ಚಿ ಕೆಡಬೇಡ ಎಂಬ ಎಚ್ಚರಿಕೆಯನ್ನೂ ನೀಡಿರುವುದು ಅವರ ಆಶಯಕ್ಕೆ ಸ್ಪಷ್ಟತೆಯನ್ನು ಒದಗಿಸುತ್ತದೆ.

ಮನುಷ್ಯನು ನೆಚ್ಚಿಕೊಳ್ಳಬೇಕಾದುದು ಭಗವಂತನನ್ನು ಮಾತ್ರ. ಭಗವಂತನ ಅನುಭೂತಿಯನ್ನು ಹೊಂದಿದಾಗ ಮನುಷ್ಯ ಜನ್ಮ ಸಾರ್ಥಕತೆಯನ್ನು ಹೊಂದುವುದು. ಅದಕ್ಕಾಗಿ ಭಗವಂತನನ್ನು ಭಕ್ತಿಯಿಂದ ಸ್ಮರಿಸಬೇಕು. ಭಕ್ತಿಯಿಲ್ಲದ ನಾಮಸ್ಮರಣೆ ಪ್ರಯೋಜನಕ್ಕೆ ಬಾರದು. ಆಡಿದಡೇನೋ ಹಾಡಿದಡೇನೋ ಓದಿದರೇನೊ? ಆಡದೆ ನವಿಲು, ಹಾಡದೆ ತಂತಿ, ಓದದೇ ಗಿಳಿ. ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವಾ ಎನ್ನುವ ಬಸವಣ್ಣನವರು ಭಕ್ತಿಯಿಂದ ಭಗವಂತನನ್ನು ನೆನೆಯಬೇಕೆನ್ನುತ್ತಾರೆ. ಹೃದಯದಲ್ಲಿ ಭಗವಂತನ ಬಗ್ಗೆ ಅಪಾರ ಪ್ರೇಮವಿದ್ದರೆ ಭಗವಂತನಲ್ಲಿ ಸಮಾವಿಷ್ಟಗೊಳ್ಳಲು ಸಾಧ್ಯವಾಗುವುದು. ಆದ್ದರಿಂದ ಸಂಸಾರ ಮತ್ತು ಸಿರಿ–ಸಂಪತ್ತು ಕ್ಷಣಿಕ ಮತ್ತು ಗಾಳಿಗಿಟ್ಟ ದೀಪದಂತಿರುವುದನ್ನು ಅರಿತು ಭಗವಂತನನ್ನು ಭಕ್ತಿಯಿಂದ ಸ್ಮರಿಸಬೇಕೆನ್ನುತ್ತಾರೆ. ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

# ಅಶ್ವಿನಿ ಅತ್ಯಾಚಾರ ಕೊಲೆ ಆರೋಪಿಗಳ ಬಂಧನಕ್ಕೆ ಸಿಂಧನೂರು ಹೋರಾಟ ಸಮಿತಿ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿರವಾರ ತಾಲ್ಲೂಕಿನ ಹೊಕ್ರಾಣಿ ಗ್ರಾಮದ ದಲಿತ ಯುವತಿ ಕು.ಅಶ್ವಿನಿ ಅವರ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಬರ್ಬರವಾಗಿ ಹತ್ಯೆ ಮಾಡಲಾಗಿದೆ ಎಂಬ ಆರೋಪ ಅತ್ಯಂತ ಗಂಭೀರವಾಗಿದ್ದು, ಘಟನೆ ಖಂಡನೀಯವಾಗಿದೆ.**

ಪ್ರಕರಣದ ಆಯಾಮಗಳನ್ನು ಒಳಗೊಂಡಂತೆ ಪಾರದರ್ಶಕ, ನಿಷ್ಪಕ್ಷಪಾತ ಹಾಗೂ ತ್ವರಿತ ತನಿಖೆ ನಡೆಸಿ, ಕೃತ್ಯದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳನ್ನು ಕೂಡಲೇ ಬಂಧಿಸಿ, ಆರೋಪ ಸಾಬೀತಾದಲ್ಲಿ ಕಾನೂನು ರೀತಿಯಲ್ಲಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದ ಕು.ಅಶ್ವಿನಿ ಅತ್ಯಾಚಾರ ಕೊಲೆ ವಿರೋಧಿ ಹೋರಾಟ ಸಮಿತಿ ನಗರದ ಪ್ರವಾಸಿ ಮಂದಿರದಿಂದ ಪ್ರತಿಭಟನಾ ಮೆರವಣಿಗೆ ಮೂಲಕ ತಹಶೀಲ್ದಾರ್ ಕಚೇರಿಗೆ ತಲುಪಿ ಗೃಹ ಸಚಿವರಾದ ಪ್ರಿಯಾಂಕ ಖರ್ಗೆಯವರಿಗೆ ಮನವಿ ಪತ್ರ ಸಲ್ಲಿಸಿದರು.

ಹೋರಾಟ ಸಮಿತಿ ಸಂಚಾಲಕ ನಾಗರಾಜ ಪೂಜಾರ್ ಮಾತನಾಡಿ, 2026ರ ಆಗಸ್ಟ್ 19ರಂದು ಸಂಜೆ ಸುಮಾರು 6.30ರ ವೇಳೆಗೆ ಅಶ್ವಿನಿ ಅವರು ಬಯಲು ಬಹಿರ್ದೆಸೆಗೆ ತೆರಳಿದ್ದ ಸಂದರ್ಭದಲ್ಲಿ ಅಪಹರಿಸಿ, ಸಾಮೂಹಿಕ ಅತ್ಯಾಚಾರ ನಡೆಸಿ ಹತ್ಯೆ ಮಾಡಿ, ಗ್ರಾಮದ ಹಾಳು ಬಾವಿಯಲ್ಲಿ ಶವವನ್ನು ಎಸೆದಿರುವ ಆರೋಪ ಕೇಳಿಬಂದಿದೆ. ಈ ಅಮಾನವೀಯ ಘಟನೆ ಇಡೀ ಜಿಲ್ಲೆಯ ಜನರನ್ನು ಆತಂಕಕ್ಕೀಡು ಮಾಡಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರ ಸುರಕ್ಷತೆ ಹಾಗೂ ಭದ್ರತೆಯ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಮುಖಂಡ ಅಶೋಕ ನಂಜಲದಿನ್ನಿ ಮಾತನಾಡಿ, ಸ್ವಾತಂತ್ರ್ಯ ದೊರೆತು 79 ವರ್ಷಗಳಾದರೂ ಗ್ರಾಮೀಣ ಪ್ರದೇಶದ ಮಹಿಳೆಯರು ಸುರಕ್ಷ ಶೌಚಾಲಯದಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿ ಬಯಲು ಬಹಿರ್ದೆಸೆಗೆ ತೆರಳಬೇಕಾದ ಪರಿಸ್ಥಿತಿ ಇನ್ನೂವರೆಗೂ ಮುಂದುವರಿದಿರುವುದು ಅತ್ಯಂತ ಶೋಚನೀಯ. ಮಹಿಳೆಯರಿಗೆ ಸುರಕ್ಷಿತ ಶೌಚಾಲಯ ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರ ಹಾಗೂ ಸ್ಥಳೀಯ ಆಡಳಿತ ವಿಫಲವಾಗಿರುವುದು ಈ ಘಟನೆಯ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪ್ರಶ್ನಾರ್ಹವಾಗಿದೆ ಎಂದರು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕರಾದ ಚಂದ್ರಶೇಖರ ಗೊರೇಬಾಳ ಮಾತನಾಡಿ, ಸಂತ್ರಸ್ತ ಕುಟುಂಬವು ಹಲವು ಬಾರಿ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದ್ದರೂ ಸಹ ಶೌಚಾಲಯ ಸೌಲಭ್ಯ ಕಲ್ಪಿಸದಿರುವುದು ಆಡಳಿತದ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಗ್ರಾಮೀಣ



ಪ್ರದೇಶಗಳಲ್ಲಿ ಮಹಿಳೆಯರು ಮತ್ತು ಯುವತಿಯರ ಸುರಕ್ಷತೆಗಾಗಿ ಸಮರ್ಪಕ ಬೀದಿ ದೀಪಗಳು, ಸುರಕ್ಷಿತ ಶೌಚಾಲಯಗಳು, ರಸ್ತೆ ಹಾಗೂ ಅಗತ್ಯ ಮೂಲ ಸೌಕರ್ಯಗಳನ್ನು ಸರ್ಕಾರ ತುರ್ತಾಗಿ ಒದಗಿಸಬೇಕು.

ಪೊಲೀಸ್ ನಿರ್ಲಕ್ಷ್ಯದ ಬಗ್ಗೆ ತನಿಖೆಯಾಗಲಿ

ಅಶ್ವಿನಿ ನಾಪತ್ತೆಯಾದ ಸಂದರ್ಭದಲ್ಲಿ ಅವರ ಪಾಲಕರು ಸಿರವಾರ ಪೊಲೀಸ್ ಠಾಣೆಗೆ ತೆರಳಿ ಮಾಹಿತಿ ನೀಡಿದ್ದರೂ, ದೂರು ಹಾಗೂ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸದಿರುವ ಆರೋಪ ಕೇಳಿ ಬಂದಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ 4 ಜನ ಪೊಲೀಸರನ್ನು ಅಮಾನತು ಮಾಡಿರುವುದು ಮಾತ್ರ ಸಾಕಾಗುವುದಿಲ್ಲ. ಕರ್ತವ್ಯ ಲೋಪ, ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾ–ರಿಗಳ ಹೊಣೆಗಾರಿಕೆಯನ್ನು ನಿಗದಿಪಡಿಸಿ, ಅದರ ಕುರಿತು ಸಮಗ್ರ ತನಿಖೆ ನಡೆಸಬೇಕು. ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪೊಲೀಸ್ ಇಲಾಖೆಯಲ್ಲಿ ಕಟ್ಟುನಿಟ್ಟಿನ ಜವಾಬ್ದಾರಿತನವನ್ನು ಖಚಿತಪಡಿಸಬೇಕು.

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳಲ್ಲಿ ಯಾವುದೇ ರೀತಿಯ ವಿಳಂಬ ಅಥವಾ ನಿರ್ಲಕ್ಷ್ಯ ತೋರದೆ, ಪೊಲೀಸರು ತಕ್ಷಣ ಕಾನೂನು ಕ್ರಮ ಕೈಗೊಳ್ಳಬೇಕು. ದೂರು ಸ್ವೀಕರಿಸುವುದರಿಂದ ಹಿಡಿದು ತನಿಖೆ ಪೂರ್ಣ ಗೊಳಿಸುವವರೆಗೆ ಪ್ರತಿಯೊಂದು ಹಂತದಲ್ಲೂ ಸಂತ್ರಸ್ತರಿಗೆ ನ್ಯಾಯ ದೊರಕುವಂತೆ ವ್ಯವಸ್ಥೆ ರೂಪಿಸಬೇಕು ಎಂದು ದೂರಿದರು.

ಆನ್‌ಲೈನ್ ಅಶ್ಲೀಲತೆ, ಮಾದಕ ವಸ್ತುಗಳ ನಿಯಂತ್ರಣಕ್ಕೂ ಆಗ್ರಹ:

ಮಕ್ಕಳು, ಮಹಿಳೆಯರು ಮತ್ತು ಯುವತಿಯರ ಮೇಲೆ ದುಷ್ಪರಿಣಾಮ ಬೀರುವ ಅಶ್ಲೀಲ, ಪ್ರಚೋದನಾತ್ಮಕ ವಿಷಯಗಳ ಆನ್‌ಲೈನ್ ಪ್ರಸಾರ, ಮಾದಕ ವಸ್ತುಗಳ ಬಳಕೆ ಮತ್ತು ಮಹಿಳೆಯರನ್ನು ಅವಮಾನಕರ ರೀತಿಯಲ್ಲಿ ಪ್ರದರ್ಶಿಸುವ ಜಾಹೀರಾತುಗಳಂತಹ ಸಾಮಾಜಿ–ಕ ಸಮಸ್ಯೆಗಳ ವಿರುದ್ಧ ಸರ್ಕಾರ ಪರಿಣಾಮಕಾರಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು. ಶಾಲಾ?ಕಾಲೇಜು ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡುವ ಪುಂಡ ಪೋಕರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಮಹಿಳೆಯರು ಮತ್ತು ಮಕ್ಕಳ ರಕ್ಷಣೆಗೆ ಜಾರಿಯಲ್ಲಿರುವ ಕಾನೂನುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ, ಸುರಕ್ಷಿತ ಸಾಮಾಜಿಕ ವಾತಾವರಣ ನಿರ್ಮಿಸಬೇಕು ಎಂದು ಸಮಿತಿ ಒತ್ತಾಯಿಸಿದೆ.

"ಸಮಿತಿಯ ಪ್ರಮುಖ ಹಕ್ಕೊತ್ತಾಯಗಳು" ಹೊಕ್ರಾಣಿ ಗ್ರಾಮದ ಕು.ಅಶ್ವಿನಿ ಮೇಲಿನ ಸಾಮೂಹಿಕ ಅತ್ಯಾಚಾರ ಕೊಲೆ ಪ್ರಕರಣವನ್ನು ನ್ಯಾಯಾಧೀಶರ ಮೇಲ್ವಿಚಾರಣೆಯಲ್ಲಿ ಪಾರದರ್ಶಕ ನಿಷ್ಪಕ್ಷಪಾತವಾಗಿ ತನಿಖೆ ನಡೆಸಬೇಕು. ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿಗಳನ್ನು ಕೂಡಲೇ ಬಂಧಿಸಿ, ಆರೋಪ ಸಾಬೀತಾದಲ್ಲಿ ತಪ್ಪಿತಸ್ಥ–ರಿಗೆ ಕಾನೂನು ರೀತ್ಯಾ ಕಠಿಣ ಶಿಕ್ಷೆ ವಿಧಿಸಬೇಕು.

ಸಂತ್ರಸ್ತ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವುದರ ಜೊತೆಗೆ, ಕುಟುಂಬದ ಸದಸ್ಯರಿಗೆ ಅಗತ್ಯ ಭದ್ರತೆ ಒದಗಿಸಬೇಕು. ಲಿಂಗಸುಗೂರು ತಾಲ್ಲೂಕಿನ ರಾಣೆಮ್ಮ ಅವರ ಬರ್ಬರ ಕೊಲೆ ಪ್ರಕರಣದಲ್ಲಿಯೂ ತಪ್ಪಿತಸ್ಥರನ್ನು ಪತ್ತೆಹಚ್ಚಿ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಮಹಿಳೆಯರ ಮೇಲಿನ ಅತ್ಯಾಚಾರ, ದೌರ್ಜನ್ಯ ಹಾಗೂ ಕೊಲೆ ಪ್ರಕರಣಗಳ ದೂರುಗಳನ್ನು ನಿರ್ಲಕ್ಷಿಸದೆ, ಪೊಲೀಸರು ಮತ್ತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಬೇಕು.

ದೇವದುರ್ಗ ತಾಲ್ಲೂಕಿನ ಹದ್ದಿನಾಳ ಗ್ರಾಮದ ಬಹುಜನ ಮುಖಂಡ ಭೂಮಾನಂದ ಅವರ ಹತ್ಯೆ ಪ್ರಕರಣದ ಎಲ್ಲ ಆರೋಪಿಗಳನ್ನು ಬಂಧಿಸಿ, ಆರೋಪ ಸಾಬೀತಾದಲ್ಲಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ರಾಯಚೂರು ಜಿಲ್ಲೆಯನ್ನು ನಿಜವಾದ ಅರ್ಥದಲ್ಲಿ ಬಯಲು ಬಹಿರ್ದೆಸೆ ಮುಕ್ತಗೊಳಿಸುವ ನಿಟ್ಟಿನಲ್ಲಿ ಮನೆಗೊಂದು ಸುರಕ್ಷಿತ ಶೌಚಾಲಯ ಕಲ್ಪಿಸುವ ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು. ಮಕ್ಕಳು, ಮಹಿಳೆಯರು ಹಾಗೂ ಯುವತಿಯರ ರಕ್ಷಣೆಗೆ ಸಂಬಂಧಿಸಿದ ಕಾನೂನುಗಳು, ಮಹಿಳಾ ಮತ್ತು ಮಕ್ಕಳ ಸುರಕ್ಷತಾ ಕಾನೂನುಗಳು ಹಾಗೂ ನಿರ್ಭಯಾ ಕಾನೂನು ತಿದ್ದುಪಡಿಗಳ ಅಡಿಯಲ್ಲಿರುವ ಕಠಿಣ ನಿಬಂಧನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಕೂಲಿಕಾರರು ಹಾಗೂ ಬಡ ಕುಟುಂಬಗಳ ಮಕ್ಕಳ ಸುರಕ್ಷತೆ ಮತ್ತು ಭದ್ರತೆಗಾಗಿ ಅಂಗನವಾಡಿ ಮಾದರಿಯಲ್ಲಿ ಅಗತ್ಯವಿರುವ ಕಡೆ ಸುರಕ್ಷಾ ಕೇಂದ್ರಗಳನ್ನು ಆರಂಭಿಸಬೇಕು.

ಶಾಲಾ–ಕಾಲೇಜು ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡುವ ಪುಂಡ ಪೋಕರಿಗಳ ವಿರುದ್ಧ ಕಠಿಣ ಕ್ರಮ ಕೈಗೊಂಡು, ವಿದ್ಯಾರ್ಥಿನಿಯರಿಗೆ ಸುರಕ್ಷಿತ ವಾತಾವರಣ ಕಲ್ಪಿಸಬೇಕು. ಜಾಲತಾಣಗಳಲ್ಲಿ ಅಶ್ಲೀಲ ಚಿತ್ರಗಳು ಹಾಗೂ ಮಹಿಳೆಯರನ್ನು ಅವಮಾನಿಸುವ ಅಥವಾ ಲೈಂಗಿಕವಾಗಿ ವಸ್ತುವೀಕರಿಸುವ ವಿಷಯಗಳ ಪ್ರಸಾರವನ್ನು ಕಾನೂನುಬದ್ಧವಾಗಿ ನಿಯಂತ್ರಿಸಬೇಕು.

ಮಹಿಳೆಯರಿಗೆ ಸುರಕ್ಷಿತ ಹಾಗೂ ಗೌರವಯುತ ಜೀವನ ನಡೆಸುವ ವಾತಾವರಣ ಕಲ್ಪಿಸುವುದು ಸರ್ಕಾರದ ಮೂಲಭೂತ ಕರ್ತವ್ಯವಾಗಿದೆ. ಅಶ್ವಿನಿ ಪ್ರಕರಣದಲ್ಲಿ ಸಂಪೂರ್ಣ ಸತ್ಯ ಹೊರಬಂದು, ತಪ್ಪಿತಸ್ಥರಿಗೆ ಕಾನೂನುಬದ್ಧ ಶಿಕ್ಷೆಯಾಗುವವರೆಗೆ ಹಾಗೂ ಜಿಲ್ಲೆಯಲ್ಲಿ ಮಹಿಳೆಯರ ಸುರಕ್ಷತೆಗೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವವರೆಗೆ ಹೋರಾಟವನ್ನು ಮುಂದುವ–ರಿಸಲಾಗುವುದು ಎಂದು ಕು.ಅಶ್ವಿನಿ ಅತ್ಯಾಚಾರ ಕೊಲೆ ವಿರೋಧಿ ಹೋರಾಟ ಸಮಿತಿ ಎಚ್ಚರಿಸಿದೆ.

ಇದೇ ಸಂದರ್ಭದಲ್ಲಿ ಚಲುವಾದಿ ಮಹಾಸಭಾ ಅಧ್ಯಕ್ಷ ರಾಮಣ್ಣ ಗೋನಾವರ, ಡಿ.ಎಚ್. ಕಂಬಳಿ, ಸೇರಿದಂತೆ ಇತರರು ಮಾತನಾಡಿದರು . ಈ ಪ್ರತಿಭಟನೆಯಲ್ಲಿ ಮುಂಜುನಾಥ ಗಾಂಧಿನಗರ, ಅರುಣಕುಮಾರ್ ಬೇರಿಗಿ, ಬಸವರಾಜ ಬಾದರ್ಲಿ, ಹನುಮಂತಪ್ಪ ಗೋಮರ್ಸಿ, ವಿರೇಶ ಹಂಚಿನಾಳ, ಬಸವರಾಜ ಬೇಳಗುರ್ಕಿ, ಆರ್. ಎಚ್ ಕಲಮಂಗಿ, ಬಸವರಾಜ ಕೊಂಡೆ, ನರಸಪ್ಪ ಕಟ್ಟಿಮನಿ, ಬಸವರಾಜ ಹಸಮಕಲ್, ಹಾಜಿಸಾಬ್ ಆಯನೂರು, ಮ–ರಿಯಮ್ಮ, ಶಿವಮ್ಮ, ಕೃಷ್ಣಮೂರ್ತಿ ಇತರರು ಇದ್ದರು.

ನೊಂದಣಿ ಸಂಖ್ಯೆ : ಸಂನಿರಾ/ವಿ–1/ಸೌ.ಕಾ.ನೋ : 6157/2022–23

**ಮಸ್ಕಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಾಲಾಪೂರ**

ಜನನಿ ಕಾಲೇಜ್ ಬಿಲ್ಡಿಂಗ್ ಕಾಲುವೆ ಪಕ್ಕದಲ್ಲಿ ಹಾಲಾಪೂರ–584120 ತಾ| ಮಸ್ಕಿ ಜಿ| ರಾಯಚೂರ

ಸರ್ವಸದಸ್ಯರ 4 ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟಿಸು

ಮಾನ್ಯ ಸಹಕಾರಿಯ ಸದಸ್ಯರೆ,

2025–26 ನೇ ಸಾಲಿನ ಸರ್ವ ಸದಸ್ಯರ 4 ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 13–09–2026 ಭಾನುವಾರ ದಂದು ಬೆಳಿಗ್ಗೆ 10–30 ಕ್ಕೆ ನಮ್ಮ ಸಹಕಾರಿ ಸಂಘದ ಆವರಣದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ತಿರುಪತಿ ಜಂಗಮರಹಳ್ಳಿ ಇವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ.ಸಹಕಾರಿಯ ಎಲ್ಲಾ ಅರ್ಹ ಸದಸ್ಯರಿಗೆ ನೋಟೀಸ ತಲುಪಿಸಲಾಗಿದೆ.ನೋಟೀಸ್ ತಲುಪದೇ ಇದ್ದ ಸದಸ್ಯರು ಈ ಪತ್ರಿಕಾ ಪ್ರಕಟಣೆಯನ್ನು ನೋಟಿಸ್ ಎಂದು ಪರಿಗಣಿಸಿ ಸಾಮಾನ್ಯ ಸಭೆಗೆ ಸರಿಯಾದ ಸಮಯಕ್ಕೆ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ಕಾರ್ಯಕ್ರಮದ ಸ್ಥಳ ಮತ್ತು ದಿನಾಂಕ
13–09–2026 ರಂದು
ಭಾನುವಾರ ಬೆಳಿಗ್ಗೆ 10–30 ಕ್ಕೆ
ಸಹಕಾರಿ ಆವರಣ ಹಾಲಾಪೂರ

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ,
ಶರತ್‌ಕುಮಾರ ಸಿ.ಎ
ಮುಖ್ಯಕಾರ್ಯನಿರ್ವಾಹಕರು

# ತುರ್ತು ಸಂದರ್ಭ ಎದುರಿಸುವ ಕೌಶಲ್ಯ ಕಲಿತ ವಿದ್ಯಾರ್ಥಿಗಳು ಕಾಲೇಜು ಆವರಣದಲ್ಲಿ ಅಗ್ನಿಶಾಮಕ ಪ್ರಾತ್ಯಕ್ಷಿಕೆ, ಸ್ಥಳಾಂತರ ಅಭ್ಯಾಸ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಅಗ್ನಿ ಅವಘಡ ಸೇರಿದಂತೆ ಯಾವುದೇ ತುರ್ತು ಪರಿಸ್ಥಿತಿ ಎದುರಾದಾಗ ಆತಂಕಕ್ಕೆ ಒಳಗಾಗದೆ ಸುರಕ್ಷಿತವಾಗಿ ಪರಿಸ್ಥಿತಿ ನಿಭಾಯಿಸುವ ಕುರಿತು ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿ ನೀಡುವ ಉದ್ದೇಶದಿಂದ ಕಾಲೇಜು ಆವರಣದಲ್ಲಿ ಸ್ಥಳಾಂತರ ಅಭ್ಯಾಸ ಹಾಗೂ ಅಗ್ನಿಶಾಮಕ ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯಿತು.**

ಎನ್‌ಸಿಸಿ, ರೋವರ್ಸ್ ಮತ್ತು ರೇಂಜರ್ಸ್, ಎನ್–ಎಸ್‌ಎಸ್ ಹಾಗೂ ವೈಆರ್‌ಸಿ ಘಟಕಗಳ ಸಹಯೋಗದಲ್ಲಿ ಸಿಐಎಸ್‌ಎಫ್ ಮತ್ತು ಕೂಡಗಿ ಎನ್‌ಟಿಪಿಸಿ ಅಗ್ನಿಶಾಮಕ ದಳದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಅಗ್ನಿ ಸುರಕ್ಷತೆ, ತುರ್ತು ಸ್ಥಳಾಂತರ ಹಾಗೂ ಪ್ರಥಮ ಚಿಕಿತ್ಸೆಯ ಕುರಿತು ಜಾಗೃತಿ ಮೂಡಿಸಲಾಯಿತು.

ಸಂಪನ್ಮೂಲ ವ್ಯಕ್ತಿ ಸಿಐಎಸ್‌ಎಫ್ ಹೆಡ್‌ಕಾನ್ಸ್‌ಟೇಬಲ್ (ಫೈರ್) ಉಮೇಶ ಎಚ್. ಅವರು ಬೆಂಕಿ ಕಾಣಿಸಿಕೊಂಡ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ಅಗ್ನಿಶಾಮಕ ಉಪಕರಣಗಳ ಬಳಕೆ, ಕಟ್ಟಡದಿಂದ ಸುರಕ್ಷಿತವಾಗಿ ಹೊರಬರುವ ವಿಧಾನ ಹಾಗೂ ಗಾಯಾಳುಗಳಿಗೆ ನೀಡಬೇಕಾದ ಪ್ರಥ–ಮ ಚಿಕಿತ್ಸೆಯನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ದಯಾನಂದ ಮೂಗಡ್ಲಿಮಠ ಮಾತನಾಡಿ, “ಅಪಾಯದ




ಸಂದರ್ಭದಲ್ಲಿ ಸಮಯ ಪ್ರಜ್ಞೆ ಹಾಗೂ ಧೈರ್ಯ ಅತ್ಯಂತ ಮುಖ್ಯ. ಪ್ರತಿಯೊಬ್ಬ ವಿದ್ಯಾರ್ಥಿಯೂ ಅಗ್ನಿ ಸುರಕ್ಷತೆ ಮತ್ತು ಪ್ರಥಮ ಚಿಕಿತ್ಸೆಯ ಪ್ರಾಯೋಗಿಕ ಜ್ಞಾನ ಹೊಂದಿರಬೇಕು” ಎಂದು ಹೇಳಿದರು. ಐಕ್ಯೂಎಸಿ ಸಂಯೋಜಕಿ ಡಾ. ದೀಪಾ ಮಾಳಗಿ, ರಮೇಶ ಜಾಧವ, ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ರಾಘವೇಂದ್ರ ಮಿಸ್ಕಿನ್, ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕಾರಿಗಳಾದ ಡಾ. ಸುಜಾತ ಚಲವಾದಿ, ಡಾ. ಅಶೋಕ ರಾಠೋಡ, ಎನ್–ಎಸ್‌ಎಸ್ ಅಧಿಕಾರಿಗಳಾದ ಕಾಶಿನಾಥ ದೇಸಾಯಿ, ಲಲಿತಾ ಗೌಡರ ಸೇರಿದಂತೆ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪತಿಯ ಜನ್ಮದಿನದಲ್ಲಿ ಪತ್ನಿ ನೇತ್ರದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿ – ಡಾ. ಚನ್ನಬಸವ ಸ್ವಾಮಿ ಹಿರೇಮಠ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು – ಶಿವಶಂಕರ ಅಂಗಡಿ ಸಾಫ್ಟ್‌ವೇರ್ ಇಂಜಿನಿಯರ್ ಬೆಂಗಳೂರು ಇವರ ಜನ್ಮದಿನ ಸಮಾರಂಭ ಕಾರ್ಯಕ್ರಮದಲ್ಲಿ ಅವರ ಧರ್ಮಪತ್ನಿಯವರಾದ ದೀಪಾ ಶಿವಶಂಕರ ಅಂಗಡಿ ಹಾಗೂ ಮಗಳಾದ ಚಿನ್ಮಯಿ ಅಂಗಡಿ ಇವರುಗಳು ರಾಯಚೂರಿನ ರಿಮ್ಸ್ ಮೆಡಿಕಲ್ ಕಾಲೇಜಿಗೆ ನೇತ್ರದಾನ ಮಾಡಿ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತ–ರಿಸುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ.**

ಇದೇ ಕಾರ್ಯಕ್ರಮದಲ್ಲಿ ಯಾದಗಿ–ರಿಯ ವಟ್ಟಿಕೂಟಿ ನಾಗಮಣಿ ಸೂರ್ಯ ಚಂದ್ರರಾವ್ ಹಾಗೂ ಕುಟುಂಬಸ್ಥರಾದ ವಟ್ಟಿಕೂಟಿ ಬಾಲು ಮಹೇಂದ್ರ ಯೇನಮನಿ ಅನುಷಾ ಶಿವರಾಮ ರೆಡ್ಡಿ ಇವರುಗಳ ನೂತನ ಗೃಹಪ್ರವೇಶದ ಅಂಗವಾಗಿ ಆಶ್ರಮದಲ್ಲಿ ಇಡೀ ದಿನ ಮಹಾಪ್ರಸಾದ ಸೇವೆ ಸಲ್ಲಿಸಿದರು. ಮತ್ತು ಕಾರುಣ್ಯ ಆಶ್ರಮದ ಸಂಸ್ಥಾಪಕರಾದ ಈರಮ್ಮ ವೇ. ಮೂ.ಅಮರಯ್ಯ ಸ್ವಾಮಿ ಹಿರೇಮಠ ಈ ಆದ–ರ್ಶ ದಂಪತಿಗಳ ಪ್ರೀತಿಯ ಮೊಮ್ಮಕ್ಕಳಾದ ಶರಣು



ಸ್ವಾಮಿ ಬಸವ ಸ್ವಾಮಿ ಇವರುಗಳ ಜನ್ಮದಿನ ಸಮಾರಂಭ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು. ಈ ಕಾರ್ಯಕ್ರಮಗಳನ್ನುದ್ದೇಶಿಸಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಪತಿಯ ಜನ್ಮದಿನದಲ್ಲಿ ಪತ್ನಿ ನೇತ್ರದಾನ ಮಾಡುವ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ.

ಈ ನಮ್ಮ ಕಾರುಣ್ಯ ಸಂಸ್ಥೆ ಹುಟ್ಟಿದಾಗನಿಂದಲೂ ಸಹ ಸಾರ್ವಜನಿಕರಲ್ಲಿಯೂ ಸಹ ನೇತ್ರದಾನ ದೇಹ ದಾನದ ಹಲವಾರು ಅಭಿಯಾನಗಳನ್ನು ಮಾಡುವ ಮೂಲಕ ರಾಯಚೂರಿನ ರಿಮ್ಸ್ ಮೆಡಿಕಲ್ ಕಾಲೇಜಿನ ಪ್ರೀತಿಗೆ ಪಾತ್ರವಾಗಿದೆ. ಮತ್ತು ನಮ್ಮ ಆಶ್ರಮದಲ್ಲಿಯೂ ಕೂಡ ಸ್ವರ್ಗಸ್ಥರಾದರೆ ನಾವು ಅನಾಥ–ರಾಗಿರಬಹುದೇ ಹೊರತು ಸಮಾಜ ಅನಾಥ–ವಾಗಬಾರದು ನಮ್ಮ ಕಣ್ಣುಗಳು ಇನ್ನೊಬ್ಬರ ಬಾಳಿಗೆ ಬೆಳಕಾಗಲಿ ನಮ್ಮ ದೇಹ ವೈದ್ಯಕೀಯ ಶಿಕ್ಷಣ–ಕ್ಕೆ ಅನುಕೂಲವಾಗಲಿ ಎನ್ನುವ ಉದ್ದೇಶದಿಂದ ಇಂತಹ ನಿರ್ಣಯಗಳನ್ನು ಕೈಗೊಂಡಿದ್ದೇವೆ. ಈ ನಮ್ಮ ಸಂಸ್ಥೆಯ ಎಲ್ಲಾ ಕಾರ್ಯಗಳಿಗೆ ದಾನಿಗಳೇ ದೇವರಾಗಿದ್ದಾರೆ. ಮತ್ತು ವಿಶೇಷವಾಗಿ ಇಂದು ಯಾದಗಿರಿಯ ವಟ್ಟಿಕೂಟಿ ಕುಟುಂಬ ತಮ್ಮ ನೂತನ ಗೃಹಪ್ರವೇಶದಲ್ಲಿಯೂ ಕೂಡ ಕಾರುಣ್ಯ ಕುಟುಂಬದಲ್ಲಿ ಮಹಾಪ್ರಸಾದ ಸೇವೆ ಸಲ್ಲಿಸುವ ಕಾರ್ಯ ಮಾನವೀಯತೆಗೆ ಮೆರುಗು ತಂದಿದೆ.

ಪ್ರತಿಯೊಬ್ಬರೂ ಕೂಡ ಇಂತಹ ಕಾರ್ಯಕ್ರಮಗಳನ್ನು ಆಚರಿಸಿಕೊಂಡರೆ ಅದೆಷ್ಟೋ ಅಂಧ–ಅನಾಥರ ಹಸಿವು ನೀಗಿಸಿದಂತಾಗುತ್ತದೆ. ಮತ್ತು ಅನ್ನದಾನಕ್ಕೆ ಸಂಪೂರ್ಣ ಅರ್ಥ ಸಿಗುತ್ತದೆ. ಇಂತಹ ನಿರಂತರ ವಿಭಿನ್ನ ಕಾರ್ಯಗಳನ್ನು ಸಾಮಾಜಿಕ ಮಾಡುವ ಬಹುದೊಡ್ಡ ಶಕ್ತಿಯಾಗಿ ದಾನಿಗಳು ಕಾರುಣ್ಯ ಕುಟುಂಬವನ್ನು ಕಾಪಾಡುತ್ತಿದ್ದಾರೆ. ಇಂತಹ ದಾನಿಗಳಿಗೆ ನಿರಂತರ ಭಗವಂತನ ಆಶೀರ್ವಾದವಿರುತ್ತದೆ. ಇಂದಿನ ಈ ಕಾರ್ಯಕ್ರಮದಲ್ಲಿ ವಿನೂತನವಾದಂತಹ ಸೇವೆ ಸಲ್ಲಿಸಿರುವ ಮಹಾದಾನಿಗಳಿಗೆ ಮತ್ತು ನೇತ್ರದಾನ ಮಾಡಿರುವ ಅಂಗಡಿ ಕುಟುಂಬಕ್ಕೆ ಸಿಂಧನೂ–ರಿನ ಕರುಣೆಯ ಕಾರುಣ್ಯ ಕುಟುಂಬದಿಂದ ಹೃದಯಪೂರ್ವಕ ಹೃತ್ಪೂರ್ವಕ ಧನ್ಯವಾದಗಳು. ಮತ್ತು ಇಂದು ನನ್ನ ಅವಳಿ ಜೋಡಿ ಮಕ್ಕಳಾದ ಶರಣು ಸ್ವಾಮಿ ಬಸವ ಸ್ವಾಮಿ ಇವರುಗಳಿಗೂ ಕೂಡ ತಮ್ಮೆಲ್ಲರ ಆಶೀರ್ವಾದವಿರಲಿ ಎಂದು ಭಾವನಾತ್ಮಕವಾಗಿ ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಆಶ್ರಮದಲ್ಲಿ ಆಶ್ರಯ ಪಡೆದ ವಸಂತ ಹಲವಾರು ಗಾನಗಳ ಮೂಲಕ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ ದಾನಿಗಳಿಗೆ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಸುಜಾತ ಹಿರೇಮಠ ಸದಸ್ಯರು ಕಾರುಣ್ಯ ಆಶ್ರಮ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಸೇವಾಕರ್ತ ಮಕ್ಕಳಾದ ಶರಣು ಸ್ವಾಮಿ ಬಸವ ಸ್ವಾಮಿ ಹಾಗೂ ಎಲ್ಲಾ ಆಶ್ರಯದಾತರುಗಳು ಉಪಸ್ಥಿತರಿದ್ದು ಆಶೀರ್ವದಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101